# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 11.03.2013 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ತೇಜಸ್ವಿನಿ ಎನ್.ರಾಜು – ಸದಸ್ಯರು | ಉಪ ಆಯುಕ್ತರು (ಭೂಸ್ವಾಧೀನ), |
| ಸುರೇಶ್. ಹೆಚ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಜಾಹೀರಾತು) |
| ಮುನಿಸ್ವಾಮಿಗೌಡ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) |
| ಆನಂದ್. ವಿ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಜೆ.ಸಿ.ನಗರ |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | ಇತರೆ ಸಿಬ್ಬಂಧಿ ವರ್ಗ |
| ಗಂಗಾಂಬಿಕೆ – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| ಗೈರು ಹಾಜರಿದ್ದ ಸದಸ್ಯರುಗಳು | --- |
| ಕೆ. ಪೂರ್ಣಿಮ – ಸದಸ್ಯರು | --- |
| ಕ್ವೀನ್‌ಎಲಿಜೆಬತ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/211/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌಕಾ/ಅನುದಾನ/ಪಿಆರ್/79/2012 –13, ದಿನಾಂಕ : 06.02.2013 ರಲ್ಲಿ ವಿವರಿಸಿರುವಂತೆ, ಶ್ರೀ ಸುನೀಲ್ ಪುರಾಣಿಕ್, ನಿರ್ದೇಶಕರು, ನಂ.14, 3ನೇ ಅಡ್ಡರಸ್ತೆ, ಎ.ಜಿ.ಎಸ್. ಲೇಔಟ್, ಹೇರೋಹಳ್ಳಿ, ಬೆಂಗಳೂರು–560061 ರವರು ಮಾನ್ಯ ಉಪ ಮಹಾಪೌರರಿಗೆ ಅರ್ಜಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುದಾನದ ಅಡಿಯಲ್ಲಿ ನಿರ್ಮಿಸಲಾಗುತ್ತಿರುವ ನಾಡಪ್ರಭು ಕೆಂಪೇಗೌಡ ಸಾಕ್ಷ್ಯ ಚಿತ್ರಕ್ಕೆ ಪಾಲಿಕೆಯ ವತಿಯಿಂದ ಈಗಾಗಲೇ ರೂ.25.00 ಲಕ್ಷ ಬಿಡುಗಡೆ ಮಾಡಲಾಗಿದ್ದು, ಆದರೆ, ನಾಡಪ್ರಭು ಕೆಂಪೇಗೌಡ ಸಾಕ್ಷ್ಯಚಿತ್ರವನ್ನು ಪೂರ್ಣಗೊಳಿಸಲು ಸುಮಾರು ರೂ.50.00 ಲಕ್ಷಗಳ ಅನುದಾನವನ್ನು ಅಂದಾಜು ಸಲ್ಲಿಸಲಾಗಿರುವುದರಿಂದ ಬಾಕಿ ಮೊತ್ತ ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಮಾನ್ಯ ಉಪ ಮಹಾಪೌರರು ದಿನಾಂಕ : 21.01.2013 ರಂದು ಟಿಪ್ಪಣಿ ಮಂಡಿಸಿ 2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಕೆಂಪೇಗೌಡರ ಬಗ್ಗೆ ಡಾಕ್ಯುಮೆಂಟರಿ ವೆಚ್ಚಗಳು ಪಿ–0052ರ ಅಡಿಯಲ್ಲಿ ರೂ.30.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಸದರಿ ಲೆಕ್ಕಶೀರ್ಷಿಕೆಯಿಂದ ನಾಡಪ್ರಭು ಕೆಂಪೇಗೌಡರ ಸಾಕ್ಷ್ಯಚಿತ್ರವನ್ನು ಪೂರ್ಣಗೊಳಿಸಲು ಸಮೃದ್ಧಿ ಮೀಡಿಯಾ ರವರಿಗೆ ಅನುದಾನ ನೀಡಲು ಆದೇಶಿಸಿರುತ್ತಾರೆ.

ಸದರಿ ಸಂಸ್ಥೆಗೆ 2011–12ನೇ ಸಾಲಿನಲ್ಲಿ ಕೆಂಪೇಗೌಡ ಸಾಕ್ಷ್ಯಚಿತ್ರ ನಿರ್ಮಿಸಲು ರೂ.25.00 ಲಕ್ಷಗಳ ಸಹಾಯಧನ ಪಡೆದಿದ್ದು, ಸದರಿ ಮೊತ್ತಕ್ಕೆ ಸಂಬಂಧಿಸಿದಂತೆ ಸದ್ಬಳಕೆ ಪ್ರಮಾಣ ಪತ್ರ ಹಾಗೂ ಚಾರ್ಟೆಡ್ ಅಕೌಂಟೆಂಟ್ ರವರಿಂದ ದೃಢೀಕರಿಸಿರುವ ಆಡಿಟ್ ವರದಿಗಳನ್ನು ನೀಡಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಕೆಂಪೇಗೌಡರ ಬಗ್ಗೆ ಡಾಕ್ಯುಮೆಂಟರಿ ವೆಚ್ಚಗಳು ಪಿ–0052ರ ಅಡಿಯಲ್ಲಿ ರೂ.30.00 ಲಕ್ಷಗಳನ್ನು ಮೀಸಲಿರಿಸಿದ್ದು, ಸದರಿ ಮೊತ್ತದಲ್ಲಿ ರೂ.25.00 ಲಕ್ಷಗಳ ಬಾಕಿ ಅನುದಾನ ಬಿಡುಗಡೆ ಮಾಡಲು ಮಾನ್ಯ ಉಪ ಮಹಾಪೌರರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ನಾಡಪ್ರಭು ಕೆಂಪೇಗೌಡ ಸಾಕ್ಷ್ಯಚಿತ್ರವನ್ನು

ನಿರ್ಮಿಸಲು ಮೆ॥. ಸಮೃದ್ಧಿ ರವರಿಗೆ ಬಾಕಿ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿ.06.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/239/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ನಂ.196 ಅಂಜನಾಪುರ ವ್ಯಾಪ್ತಿಯ **ಗೊಲ್ಲಹಳ್ಳಿ** ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 110 ಹಳ್ಳಿಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಪಾಲಿಕೆಯ 2012–13ನೇ ಆಯವ್ಯಯದ ಪುಟ ಸಂಖ್ಯೆ 131ರಲ್ಲಿ ಲೆಕ್ಕಶೀರ್ಷಿಕೆ 2654ರಲ್ಲಿ ನಿಗದಿಪಡಿಸಿರುವ ವಿಶೇಷ ಅನುದಾನವನ್ನು ಬಿಡುಗಡೆ ಕೋರಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Improvements of main roads and Drains at Gollahalli in ward no 196 | 19.99 |
| 2 | Improvements of cross roads and Drains at Gollahalli in ward no 196 | 19.99 |
| 3 | Providing drains CC roads construction of culverts at Gollahalli in ward no 196 | 19.99 |
| 4 | Drilling of Borewells Providing pump and motors supplying of drinking water through tankers and maintenance of UGD and missing bits Gollahalli in ward no 196 | 19.99 |
| 5 | Improvements to Adi nayarana temple road and drains Gollahalli in ward no 196 | 19.95 |
| | **ಒಟ್ಟು** | **99.91** |

ಮೇಲ್ಕಂಡ ಕಾಮಗಾರಿಗಳನ್ನು ರೂ 99.91 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕಾಲವಕಾಶ ಕಡಿಮೆ ಇರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/240/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ನಂ.196 ಅಂಜನಾಪುರ ವ್ಯಾಪ್ತಿಯ **ಅಂಜನಾಪುರ** ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 110 ಹಳ್ಳಿಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಪಾಲಿಕೆಯ 2012–13ನೇ ಆಯವ್ಯಯದ ಪುಟ ಸಂಖ್ಯೆ 131ರಲ್ಲಿ ಲೆಕ್ಕಶೀರ್ಷಿಕೆ 2654ರಲ್ಲಿ ನಿಗದಿಪಡಿಸಿರುವ ವಿಶೇಷ ಅನುದಾನವನ್ನು ಬಿಡುಗಡೆ ಕೋರಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Improvements of main roads and Drains at Anjanapura in ward no 196 | 19.99 |
| 2 | Improvements of cross roads and Drains at Anjanapura in ward no 196 | 19.99 |
| 3 | Providing drains CC roads construction of culverts at Anjanapura in ward no 196 | 19.99 |
| 4 | Drilling of Borewells Providing pump and motors supplying of drinking water through tankers and maintenance of UGD and missing bits Anjanapura in ward no 196 | 19.99 |
| 5 | Improvements to Real House Appartment road and drains Anjanapura in ward no 196 | 19.95 |
| | **ಒಟ್ಟು** | **99.91** |

ಮೇಲ್ಕಂಡ ಕಾಮಗಾರಿಗಳನ್ನು ರೂ 99.91 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ : **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕಾಲವಕಾಶ ಕಡಿಮೆ ಇರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :-ತೆಆಸ್ಥಾಸ/241/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ನಂ.196 ಅಂಜನಾಪುರ ವ್ಯಾಪ್ತಿಯ **ಅವಲಹಳ್ಳಿ** ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 110 ಹಳ್ಳಿಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಪಾಲಿಕೆಯ 2012-13ನೇ ಆಯವ್ಯಯದ ಪುಟ ಸಂಖ್ಯೆ 131ರಲ್ಲಿ ಲೆಕ್ಕಶೀರ್ಷಿಕೆ 2654ರಲ್ಲಿ ನಿಗಧಿಪಡಿಸಿರುವ ವಿಶೇಷ ಅನುದಾನವನ್ನು ಬಿಡುಗಡೆ ಕೋರಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Improvements of main roads and Drains at Avalahalli in ward no 196 | 19.99 |
| 2 | Improvements of cross roads and Drains at Avalahalli in ward no 196 | 19.99 |
| 3 | Providing drains CC roads construction of culverts at Avalahalli in ward no 196 | 19.99 |
| 4 | Drilling of Borewells Providing pump and motors supplying of drinking water through tankers and maintenance of UGD and missing bits Avalahalli in ward no 196 | 19.99 |
| 5 | Improvements to Chikka masjid road and drains Avalahalli in ward no 196 | 19.95 |
| | ಒಟ್ಟು | **99.91** |

ಮೇಲ್ಕಂಡ ಕಾಮಗಾರಿಗಳನ್ನು ರೂ 99.91 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ : **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕಾಲವಕಾಶ ಕಡಿಮೆ ಇರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/242/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ನಂ.196 ಅಂಜನಾಪುರ ವ್ಯಾಪ್ತಿಯ **ತಿಪ್ಪಸಂದ್ರ** ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 110 ಹಳ್ಳಿಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಪಾಲಿಕೆಯ 2012-13ನೇ ಆಯವ್ಯಯದ ಪುಟ ಸಂಖ್ಯೆ 131ರಲ್ಲಿ ಲೆಕ್ಕಶೀರ್ಷಿಕೆ 2654ರಲ್ಲಿ ನಿಗಧಿಪಡಿಸಿರುವ ವಿಶೇಷ ಅನುದಾನವನ್ನು ಬಿಡುಗಡೆ ಕೋರಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Improvements of main roads and Drains at Tippasandra in ward no 196 | 19.99 |
| 2 | Improvements of cross roads and Drains at Tippasandra in ward no 196 | 19.99 |
| 3 | Providing drains CC roads construction of culverts at Tippasandra in ward no 196 | 19.99 |

| | | |
|---|---|---|
| 4 | Drilling of Borewells Providing pump and motors supplying of drinking water through tankers and maintenance of UGD and missing bits Tippasandra in ward no 196 | 19.99 |
| 5 | Improvements to Kaveri layout road and drains Tippasandra in ward no 196 | 19.95 |
| | **ಒಟ್ಟು** | **99.91** |

ಮೇಲ್ಕಂಡ ಕಾಮಗಾರಿಗಳನ್ನು ರೂ 99.91 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕಾಲವಕಾಶ ಕಡಿಮೆ ಇರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/243/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ನಂ.196 ಅಂಜನಾಪುರ ವ್ಯಾಪ್ತಿಯ **ಕೆಂಬ್ವತಹಳ್ಳಿ** ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 110 ಹಳ್ಳಿಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಅನುದಾನದಡಿಯಲ್ಲಿ ಪಾಲಿಕೆಯ 2012–13ನೇ ಆಯವ್ಯಯದ ಪುಟ ಸಂಖ್ಯೆ 131ರಲ್ಲಿ ಲೆಕ್ಕಶೀರ್ಷಿಕೆ 2654ರಲ್ಲಿ ನಿಗಧಿಪಡಿಸಿರುವ ವಿಶೇಷ ಅನುದಾನವನ್ನು ಬಿಡುಗಡೆ ಕೋರಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 1 | Improvements of main roads and Drains at Kembathalli in ward no 196 | 19.99 |
| 2 | Improvements of cross roads and Drains at Kembathalli in ward no 196 | 19.99 |
| 3 | Providing drains CC roads construction of culverts at Kembathalli in ward no 196 | 19.99 |
| 4 | Drilling of Borewells Providing pump and motors supplying of drinking water through tankers and maintenance of UGD and missing bits Kembathalli in ward no 196 | 19.99 |
| 5 | Improvements to Mariyamma temple road and drains Kembathalli in ward no 196 | 19.95 |
| | **ಒಟ್ಟು** | **99.91** |

ಮೇಲ್ಕಂಡ ಕಾಮಗಾರಿಗಳನ್ನು ರೂ 99.91 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡಿನ ಸದಸ್ಯರ ಕೋರಿಕೆಯಂತೆ ಕಾಮಗಾರಿಗಳು ತುರ್ತಾಗಿದ್ದು, ಕಾಲವಕಾಶ ಕಡಿಮೆ ಇರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/245/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅ.ಆ(ಆಸ್ತಿ)ಇಸಿ/ಪಿಆರ್/40/07–08, ದಿನಾಂಕ : 26.06.2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಾಲಿಕೆಯ ಆಸ್ತಿಗಳನ್ನು ಅಂದರೆ ಉದ್ಯಾನವನ / ಆಟದ ಮೈದಾನ / ಖಾಲಿ ಜಾಗಗಳು / ಪಾಠಶಾಲೆಗಳು / ಆಸ್ಪತ್ರೆಗಳು / ಶೌಚಾಲಯಗಳು / ಗುತ್ತಿಗೆ ನೀಡಿರುವ ಆಸ್ತಿಗಳು ಇನ್ನು ಮುಂತಾದ ಪಾಲಿಕೆ ಆಸ್ತಿಗಳನ್ನು ಅಳತೆಮಾಡಿ ವಾರ್ಡ್‌ವಾರು ಆಸ್ತಿವಹಿಗಳನ್ನು ತೆರೆದು ಅವುಗಳಲ್ಲಿ ನಿರ್ದಿಷ್ಟವಾದ ಅಳತೆ, ವಿಸ್ತೀರ್ಣ ಹಾಗೂ ಚಕ್ಕುಬಂದಿ ಮುಂತಾದ ವಿವರಗಳನ್ನು ನಮೂದಿಸುವ ಉದ್ದೇಶಕ್ಕಾಗಿ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ

ನಿವೃತ್ತ ಭೂ–ಪರ್ಯಾವೇಕ್ಷಕರನ್ನು ಸರ್ಕಾರದ ಆದೇಶದ ಸಂಖ್ಯೆ : ನಅಇ/370/ಎಂಎನ್‌ಯು/2007, ದಿನಾಂಕ : 02.11.2007ರ ಸರ್ಕಾರದ ಆದೇಶದಂತೆ ಕೆ.ಎಂ.ಸಿ ಕಾಯ್ದೆ–1976 ನಿಯಮ 20(ಎ)ರನ್ವಯ ದಿನಾಂಕ:01.01.2008ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಭೂಮಾಪಕರಿಗೆ ಮಾಸಿಕ ರೂ.10,000/– ಮತ್ತು ಪರ್ಯಾವೇಕ್ಷಕರಿಗೆ ಮಾಸಿಕ 12,000/–ರೂಗಳ ಸಂಚಿತ ವೇತನ ನಿಗಧಿಪಡಿಸಿ ನೇಮಕ ಮಾಡಿಕೊಳ್ಳಲಾಗಿತ್ತು.

ಪಾಲಿಕೆಯ ವ್ಯಾಪ್ತಿಯ 8 ವಲಯಗಳಲ್ಲಿ (198 ವಾರ್ಡ್‌ಗಳು) ಸುಮಾರು 5000 ಪಾಲಿಕೆ ಆಸ್ತಿಗಳು ಇರುವುದಾಗಿ ಅಂದಾಜಿಸಿ, ಇವುಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಲು ಪ್ರತಿ ವಲಯಕ್ಕೆ 2–3 ಜನ ಭೂಮಾಪಕರನ್ನು ನಿಯೋಜಿಸಿ ಎರಡು ವರ್ಷಗಳ ಅವಧಿಯಲ್ಲಿ ನಿವೃತ್ತ ಭೂ–ಪರ್ಯಾವೇಕ್ಷಕರ ನೇತೃತ್ವದಲ್ಲಿ ಸುಮಾರು 2420 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿಸಿ, ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ಚುನಾವಣಾ ಮಾರ್ಗಸೂಚಿ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ 16 ಕೆರೆಗಳನ್ನು ಅಳತೆ ಮಾಡಿಸಿ ಸುಮಾರು 69 ಎಕರೆ 06 ಗುಂಟೆ ಒತ್ತುವರಿ ಪ್ರದೇಶವನ್ನು ಪತ್ತೆ ಮಾಡಿಸಲಾಗಿದೆ ಹಾಗೂ ಮಿಲ್ಲರ್‌ಟ್ಯಾಂಕ್ ರಸ್ತೆ ಏರಿಯಾದಲ್ಲಿ ಇರುವ ಬಿಳೇಕಹಳ್ಳಿ ಗ್ರಾಮದ ಸ.ನಂ:16, 18, 19ರ ಗಡಿಗಳನ್ನು ಗುರ್ತುಮಾಡಿಸಿ 56 ಬ್ಲಾಕುಗಳ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಸೂಚನೆಗಳಂತೆ ಯಲಹಂಕ ವಲಯದ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ. ನಿವೇಶನ, ಉದ್ಯಾನವನ ಹಾಗೂ ಇತರೆ ಜಾಗಗಳನ್ನು ಅಳತೆ ಮಾಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಇವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ ಎರಡು ವರ್ಷಗಳ ಪ್ರಾರಂಭದಲ್ಲಿ 24 ಜನ ನಿವೃತ್ತ ಭೂಮಾಪಕರು ಕರ್ತವ್ಯಕ್ಕೆ ಹಾಜರಾಗಿದ್ದರೂ ಸಹ ಇವರ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಆಗಿಂದ್ದಾಗ್ಗೆ ಕರ್ತವ್ಯವನ್ನು ಬಿಟ್ಟು ಹೋಗಿದ್ದು, ಈ ಅವಧಿಯಲ್ಲಿ ಸರಾಸರಿ 15–16 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ–ಪರ್ಯಾವೇಕ್ಷಕರು ಕರ್ತವ್ಯ ನಿರ್ವಹಿಸಿರುತ್ತಾರೆ.

ಬಾಕಿ ಉಳಿದಿರುವ ಪಾಲಿಕೆ ಆಸ್ತಿಗಳ ಅಳತೆ ಕಾರ್ಯಗಳನ್ನು ಪೂರ್ಣಗೊಳಿಸಲು ಇವರ ಸೇವೆಯು ಅತ್ಯವಶ್ಯಕವಾಗಬೇಕಾದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದ ಸಂಖ್ಯೆ : ನಅಇ/18/ಎಂಎನ್‌ಯು/2010, ದಿನಾಂಕ : 08.07.2010 ಮತ್ತು ಸರ್ಕಾರದ ಆದೇಶದ ಸಂಖ್ಯೆ : ನಅಇ/534/ಎಂಎನ್‌ಯು/2007, ದಿನಾಂಕ : 12.07.2011ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಂತೆ ಇವರ ಸೇವೆಯನ್ನು ದಿನಾಂಕ:01.01.2010 ರಿಂದ 31.12.2010ರ ವರೆವಿಗೆ ಮತ್ತು ದಿನಾಂಕ:01.01.2011 ರಿಂದ 31.12.2011ರ ವರೆವಿಗೆ ವಿಸ್ತರಿಸಲಾಗಿರುತ್ತದೆ. ಈ ಎರಡು ವರ್ಷಗಳ ಅವಧಿಯಲ್ಲಿ ಕ್ರಮವಾಗಿ ಸರಾಸರಿ 12 ರಿಂದ 15 ಜನರಂತೆ ಭೂಮಾಪಕರು ಹಾಗೂ 4 ಜನ ಭೂಪರ್ಯಾವೇಕ್ಷಕರು ಕಾರ್ಯನಿರ್ವಹಿಸಿದ್ದು, 1892 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ. ಈ ಪಾಲಿಕೆ ಆಸ್ತಿಗಳ ಅಳತೆ ಕೆಲಸದ ಜೊತೆಗೆ ಕಸವಿಲೇವಾರಿಗಾಗಿ ಪಾಲಿಕೆಗೆ ಹಸ್ತಾಂತರಗೊಂಡಿರುವ 4 ಸ್ಥಳಗಳಲ್ಲಿನ 370 ಎಕರೆ 5 ಗುಂಟೆ ಪ್ರದೇಶದ ಅಳತೆ ಮತ್ತು 8 ವಲಯಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಹಾಗೂ ರಾಜಕಾಲುವೆಗಳ ಅಳತೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಪ್ರದೇಶಗಳ ಅಳತೆ, ಖಾತೆ ಬದಲಾವಣೆಗಳಲ್ಲಿ ವಿವಾದಾಸ್ಪದವಾದ ಪ್ರಕರಣಗಳ ಅಳತೆ ಮುಂತಾದ ಕಾರ್ಯಗಳಿಗೆ ವಲಯ ಕಛೇರಿಯ ಅಧಿಕಾರಿಗಳು ಉಪಯೋಗಿಸಿಕೊಂಡಿರುತ್ತಾರೆ.

ಡಿಸೆಂಬರ್–2011ರ ಅಂತ್ಯಕ್ಕೆ ನಿವೃತ್ತಿ ಭೂಮಾಪನ ಸಿಬ್ಬಂದಿಯಿಂದ ಒಟ್ಟು 4312 ಪಾಲಿಕೆ ಅಸ್ತಿಗಳನ್ನು ಮೇಲೆ ವಿವರಿಸಿರುವ ಇತರೆ ಅಳತೆ ಕೆಲಸಗಳ ಜೊತೆಗೆ ಅಳತೆ ಮಾಡಿಸಿದ್ದು, ಇವುಗಳ ನಕ್ಷೆ ಹಾಗೂ ಇತರೆ ವಿವರಗಳನ್ನು ಕಛೇರಿಯಲ್ಲಿ ವಾರ್ಡ್‌ವಾರು ವಹಿಗಳಲ್ಲಿ ನಮೂದಿಸಲಾಗುತ್ತಿದೆ.

ಖಾಯಂ ಭೂಮಾಪನ ಸಿಬ್ಬಂದಿಯ ತೀವ್ರ ಕೊರತೆಯಿರುವ ಕಾರಣ, 8 ವಲಯ ಅಧಿಕಾರಿಗಳು ತಮ್ಮ ಕಛೇರಿಯ ದಿನನಿತ್ಯದ ತುರ್ತು ಕಾರ್ಯಗಳಿಗೆ ನಿವೃತ್ತ ಭೂಮಾಪನ ಸಿಬ್ಬಂದಿಯ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುತ್ತಾರೆ ಹಾಗೂ ಹಾಲೀ ನಿವೃತ್ತ ಭೂಮಾಪನ ಸಿಬ್ಬಂದಿಯು ಅಗತ್ಯಕ್ಕಿಂತ ಕಮ್ಮಿ ಇದ್ದು, ಈಗ ಕೇವಲ 12 ಜನ ನಿವೃತ್ತ ಭೂಮಾಪಕರು ಹಾಗೂ 3 ಜನ ನಿವೃತ್ತ ಭೂ ಪರ್ಯಾವೇಕ್ಷಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.

ನಿವೃತ್ತ ಭೂಮಾಪನ ಸಿಬ್ಬಂದಿಯ ನೇಮಕಾತಿ ಅವಧಿಯು ದಿನಾಂಕ:31.12.2011ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ, ಇನ್ನು ಸಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳ ಅಳತೆ ಕಾರ್ಯ ಬಾಕಿ ಇರುತ್ತದೆ ಹಾಗೂ ಈ

ಕೆಳಕಂಡ ಕಾರ್ಯಗಳು ಇನ್ನೂ ನಿರ್ವಹಿಸಬೇಕಾಗಿರುವುದರಿಂದ, ಇವರ ಸೇವೆಯನ್ನು ದಿನಾಂಕ:01.01.2012 ರಿಂದ ಅನ್ವಯವಾಗುವಂತೆ ಪುನಃ **2 ವರ್ಷಗಳವರೆಗೆ** ವಿಸ್ತರಿಸುವುದು ಅತ್ಯವಶ್ಯಕವಾಗಿರುತ್ತದೆ.

1. ಸುಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಲು ಬಾಕಿ ಇರುತ್ತದೆ ಹಾಗೂ ಆಸ್ತಿವಹಿಗಳಲ್ಲಿ ದಾಖಲಿಸುವ ಕಾರ್ಯ ಪ್ರಗತಿಯಲ್ಲಿರುತ್ತೆ.
2. ಹಾಲಿ ಇರುವ 12 ಜನ ನಿವೃತ್ತ ಭೂ ಮಾಪಕರುಗಳನ್ನು ಎಂಟು ವಲಯ ಕಛೇರಿಗಳಿಗೆ ತಲಾ ಒಬ್ಬರು ಅಥವಾ ಇಬ್ಬರಂತೆ ನಿಯೋಜಿಸಲಾಗಿದ್ದು, ವಲಯ ಕಛೇರಿಯ ಅಧಿಕಾರಿಗಳು ಇವರ ಸೇವೆಯನ್ನು ಪಾಲಿಕೆ ಆಸ್ತಿಗಳ ಅಳತೆ ಜೊತೆಗೆ ರಾಜಕಾಲುವೆ ಅಳತೆ, ಸ್ಲಂ ಅಳತೆ, ನ್ಯಾಯಾಲಯಕ್ಕೆ ಸಂಬಂಧಿಸಿದ ವಿವಾದಗಳು ಹಾಗೂ ಇತರೆ ಅತ್ಯವಶ್ಯಕವಾದ ತುರ್ತು ಕಾರ್ಯಗಳಿಗೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ.
3. ಅಳತೆಯಾಗಿರುವ ಆಸ್ತಿಗಳ ಪೈಕಿ ಈಗಾಗಲೇ ಉದ್ಯಾನವನ, ಆಟದ ಮೈದಾನ ಮತ್ತು ಖಾಲಿಜಾಗಗಳಿಗೆ ಸಂಬಂಧಿಸಿದಂತೆ ಒಟ್ಟು 1066 ಆಸ್ತಿಗಳನ್ನು ಮೊದಲ ಹಂತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇನ್ನೂ ಇಂತಹ ಸುಮಾರು 550 ಆಸ್ತಿಗಳನ್ನು ಪ್ರಕಟಣೆಗೆ ಕಳುಹಿಸಬೇಕಾಗಿರುತ್ತದೆ. ಕರ್ನಾಟಕ ಉದ್ಯಾನವನ/ಆಟದ ಮೈದಾನ ಮತ್ತು ಖಾಲಿ ಜಾಗಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ–1985ರ ಅಡಿಯಲ್ಲಿ ಇವುಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕಾಗಿದೆ.
4. ಹಾಲಿ ಈಗ ಅಳತೆ ಮಾಡಿರುವ ಆಸ್ತಿಗಳನ್ನು ಹಿಂದಿನ ಆಸ್ತಿದಾಖಲೆಗಳೊಂದಿಗೆ ಸಮನ್ವಯ ಮಾಡಿ ಕೈಬಿಟ್ಟಿರುವ ಆಸ್ತಿಗಳನ್ನು ಗುರ್ತಿಸಬೇಕಾಗಿದೆ.
5. ಅಳತೆಯಾಗಿರುವ ಆಸ್ತಿಗಳ ಪೈಕಿ 400 ಆಸ್ತಿಗಳಿಗೆ ಪಿ.ಐ.ಡಿ ಸಂಖ್ಯೆ ನೀಡಲಾಗಿದ್ದು, ಉಳಿದ ಆಸ್ತಿಗಳಿಗೆ ಮಾಹಿತಿ ಪಡೆದು ಪಿ.ಐ.ಡಿ ಸಂಖ್ಯೆಯನ್ನು ಆಸ್ತಿಗಳ ವಹಿಗಳಲ್ಲಿ ದಾಖಲಿಸಬೇಕಾಗಿದೆ.
6. ಮೇಲ್ಕಂಡ ಕಾರ್ಯಗಳ ಜೊತೆಗೆ ಮಳೆ ನೀರು ಚರಂಡಿ, ರಸ್ತೆ ಮುಂತಾದ ಜಾಗಗಳಲ್ಲಿ ಒತ್ತುವರಿಗಳನ್ನು ಗುರ್ತಿಸಿ, ತೆರವುಗೊಳಿಸುವ ಕಾರ್ಯಕ್ಕೆ ಭೂಮಾಪಕರ ಸೇವೆಯು ಅತ್ಯವಶ್ಯಕವಿರುತ್ತದೆ.
7. ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಲವಾರು ಭೂ–ವಿವಾದಗಳು ನ್ಯಾಯಾಲಯಗಳಲ್ಲಿ ದಾಖಲಾಗಿದ್ದು, ಇವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ನ್ಯಾಯಾಲಯಗಳಿಗೆ ಸಲ್ಲಿಸಲು ನಿವೃತ್ತ ಭೂಮಾಪಕರ ಸೇವೆಯ ಅವಶ್ಯಕವಾಗಿರುತ್ತದೆ.
8. ಇತ್ತೀಚಿಗೆ ಮಾಹಿತಿ ಕಾಯ್ದೆ ಹಕ್ಕಿನ ಅಡಿಯಲ್ಲಿ ಸಾರ್ವಜನಿಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ನೀಡುತ್ತಿದ್ದು, ಇವುಗಳನ್ನು ತಯಾರಿಸಿ ಕಾಲಮಿತಿಯೊಳಗೆ ಮಾಹಿತಿ ನೀಡಲು ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲೆ ವಿವರಿಸಿರುವ ವಿವರಿಸಿರುವ ಹಲವಾರು ಕಾರ್ಯಗಳಿಗೆ ನಿವೃತ್ತ ಭೂ–ಪರ್ಯಾವೇಕ್ಷಕರು/ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿ ಬೇಕಾಗಿರುವ ಕಾರಣದಿಂದ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ಭೂ–ಪರ್ಯಾವೇಕ್ಷಕರ ಗುತ್ತಿಗೆ ಸೇವೆಯ ಅವಧಿಯನ್ನು ದಿನಾಂಕ:01.01.2012ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಕೆ.ಎಂ.ಸಿ.ಕಾಯ್ದೆ–1976ರ ನಿಯಮ 20(ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, **ಮಾನ್ಯ ಆಯುಕ್ತರ ದಿನಾಂಕ : 26.06.2012ರ ಟಿಪ್ಪಣಿಯನ್ನು ಪರಿಶೀಲಿಸಿ, ಪಾಲಿಕೆಯ ಆಸ್ತಿಗಳನ್ನು ಅಳತೆ ಮಾಡಿ ವಾರ್ಡ್‌ವಾರು ಆಸ್ತಿ ವಹಿಗಳನ್ನು ತೆರೆದು ಸಂಪೂರ್ಣ ವಿವರಗಳನ್ನು ನಮೂದಿಸಲು ದಿನಾಂಕ : 01.01.2012 ರಿಂದ 2 ವರ್ಷಗಳ ಅವಧಿಗೆ 3 ಜನ ನಿವೃತ್ತ ಭೂಪರ್ಯಾವೇಕ್ಷಕರು ಹಾಗೂ 12 ಜನ ನಿವೃತ್ತ ಭೂಮಾಪಕರ ಅವಶ್ಯಕತೆಯಿದ್ದು, ಕಾರ್ಯನಿರ್ವಹಿಸುತ್ತಿದ್ದ ಒಟ್ಟು 15 ಜನರಲ್ಲಿ ಈಗಾಗಲೇ ಚಿಕ್ಕಮಾದಯ್ಯನವರು ದಿನಾಂಕ : 09.05.2012 ರಂದು ಬಿಡುಗಡೆ ಹೊಂದಿರುವುದರಿಂದ ಅಲ್ಲಿಯವರೆವಿಗೂ ಅವರನ್ನು ಮುಂದುವರೆಸಿ ನಂತರ ಅವರನ್ನು ಹೊರತುಪಡಿಸಿ ಉಳಿದವರನ್ನು 2–ವರ್ಷಗಳ ಅವಧಿಗೆ ಕೆ.ಎಂ.ಸಿ ಕಾಯ್ದೆ–1976ರ ನಿಯಮ 20 (ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು**

**ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.11.2012ರ ನಿರ್ಣಯದ ಮೇರೆಗೆ, ದಿನಾಂಕ:22.12.2012ರ ಅವಲೋಕನೆಗೆ ಸಂಬಂಧಿಸಿದಂತೆ ಆಯುಕ್ತರು ದಿನಾಂಕ:08.02.2013ರಂದು ನೀಡಿರುವ ವಿವರವಾದ ವರದಿಯನ್ನು ಅವಗಾಹಿಸುತ್ತಾ ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಭೂಮಾಪಕರ/ಭೂ–ಪರ್ಯಾವೇಕ್ಷಕರ ವಯೋಮಿತಿಯ ಅನುಗುಣವಾಗಿ ಸದರಿಯವರುಗಳ ಸೇವೆಯನ್ನು ದಿನಾಂಕ:01.01.2012ರಿಂದ ಜಾರಿಗೆ ಬರುವಂತೆ 2 ವರ್ಷಗಳ ಅವಧಿಗೆ ಮುಂದುವರೆಸಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 25.02.2013ರ ನಿರ್ಣಯ.**

**ನಿರ್ಣಯ: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿ.25.02.2013ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/246/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/144/11–12, ದಿನಾಂಕ: 22–11–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:34 (98), ಆರ್.ಟಿ.ನಗರ ಮುಖ್ಯರಸ್ತೆಯ ಉದ್ಯಾನವನದ ಪಕ್ಕದ 10x10 ಅಡಿ ಅಳತೆಯ ಜಾಗವನ್ನು ಶ್ರೀ.ವಿ.ಜಗದೀಶ್ ರವರಿಗೆ ಜ್ಯೂಸ್ ಅಂಗಡಿ ನಡೆಸಲು ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ: 09–08–2011 ರಂದು ವಿಷಯ ಸಂಖ್ಯೆ:ನ.ಯೋ.ಅ.ಸ್ಥಾ.ಸ/87/2011–12 ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ:26–09–2011 ರಂದು ವಿಷಯ ಸಂಖ್ಯೆ:ತೆ.ಆ.ಸ್ಥಾ.ಸ/286/2011 ರಲ್ಲಿ ಮಾಸಿಕ ರೂ.1000/– ಗಳ ದರದಲ್ಲಿ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ನಿರ್ಣಯಗಳನ್ನು ಕೈಗೊಂಡಿರುತ್ತದೆ.

ಪ್ರಸ್ತುತ ಸ್ಥಾಯಿ ಸಮಿತಿಗಳು ತೆಗೆದುಕೊಂಡಿರುವ ನಿರ್ಣಯವನ್ನು ಕಾರ್ಯಗತಗೊಳಿಸಿದಲ್ಲಿ ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ 1985ರ ಉಲ್ಲಂಘನೆಯಾಗುತ್ತದೆ. ಆದ್ದರಿಂದ, ಸ್ಥಾಯಿ ಸಮಿತಿಗಳು ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಗೊಳಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಸರ್ಕಾರವನ್ನು ಕೋರಲಾಗಿತ್ತು.

ಮಾನ್ಯ ಸರ್ಕಾರವು ಪಾಲಿಕೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ.ವಿ.ಜಗದೀಶ್ ಇವರಿಗೆ ಜ್ಯೂಸ್ ಅಂಗಡಿ ತೆರೆಯಲು ವಾರ್ಡ್ ಸಂಖ್ಯೆ:34 (98), ಆರ್.ಟಿ.ನಗರ ಮುಖ್ಯರಸ್ತೆ ಪಕ್ಕದ ಉದ್ಯಾನವನದಲ್ಲಿ 10x10 ಅಡಿ ಅಳತೆಯ ಜಾಗವನ್ನು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ನಿರ್ಣಯಿಸಿರುವ ನಿರ್ಣಯವು ದಿನಾಂಕ:15–04–2011 ರಂದು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ 1985ರ ಅಧಿನಿಯಮ ಕಲಂ 6 ಹಾಗೂ 8ರ ಉಲ್ಲಂಘನೆಯಾಗಿರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:09–08–2011 ರಂದು ವಿಷಯ ಸಂಖ್ಯೆ:ನ.ಯೋ.ಅ.ಸ್ಥಾ.ಸ/87/2011–12 ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿ:26–09–2011 ರಂದು ವಿಷಯ ಸಂಖ್ಯೆ:ತೆ.ಆ.ಸ್ಥಾ.ಸ/286/2011 ರಲ್ಲಿ ತೆಗೆದುಕೊಂಡಿರುವ ನಿರ್ಣಯಗಳನ್ನು ಏಕೆ ರದ್ದುಪಡಿಸಬಾರದು? ಎಂಬುದಕ್ಕೆ ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976ರ ಕಲಂ 98 (2)ರನ್ವಯ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಿ ಈ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಮೇಲ್ಕಂಡ ಸ್ಥಾಯಿ ಸಮಿತಿಗಳ ಹೇಳಿಕೆ / ಸಮಜಾಯಿಷಿಗಳೇನಾದರೂ ಇದ್ದಲ್ಲಿ ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳುಹಿಸಿಕೊಡುವಂತೆ ಸೂಚಿಸಿದೆ. ಎಂಬುದಾಗಿ ತಿಳಿಸಿರುವುದರ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಹೇಳಿಕೆ / ಸಮಜಾಯಿಷಿ ನೀಡಲು ಸೂಕ್ತ ನಿರ್ಣಯಕ್ಕೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 22.11.2012ರ ಟಿಪ್ಪಣಿ ಮೇರೆಗೆ, ದಿನಾಂಕ: 22–11–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಅರ್ಜಿದಾರರು ನಿರುದ್ಯೋಗಿ ಮತ್ತು ಕಡುಬಡವರಾಗಿದ್ದು, ಜಿವನೋಪಾಯದ ದೃಷ್ಠಿಯಿಂದ ಈ ಹಿಂದೆ ನೀಡಲಾಗಿದ್ದು, ಸರ್ಕಾರದ ಅಂತಿಮ ಆದೇಶಕ್ಕೆ ಬದ್ದರಾಗಿರುವುದಾಗಿ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 22.01.2013ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.22.01.2013ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *09]. ವಿಷಯದ ಸಂಖ್ಯೆ :–ತೆಲಆಸ್ಥಾಸ/247/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/205/12–13, ದಿನಾಂಕ : 13.02.2013 ರಲ್ಲಿ ವಿವರಿಸಿರುವಂತೆ, ವಾರ್ಡ್–142, ಮೌಂಟ್‌ಜಾಯ್ ರಸ್ತೆ ಮತ್ತು ಹನುಮಂತನಗರ 4ನೇ ಕ್ರಾಸ್, ಸೇರುವ ವಾರ್ಡ್ ಕಛೇರಿ ಆವರಣದಲ್ಲಿ 8x6 ಅಡಿ ಅಳತೆಯ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ದಿ: 04–11–2002 ರಿಂದ 16–04–2007 ರವರೆಗೆ ಮಾಸಿಕ 400/– ರೂ. ಗಳಂತೆಯೂ ದಿನಾಂಕ: 17–04–2007 ರಿಂದ 04–11–2007 ರವರೆಗೆ ಮಾಸಿಕ 1,073/– ರೂ. ಗಳಂತೆ ಒಟ್ಟು 5 ವರ್ಷಗಳ ಅವಧಿಗೆ (04–11–2002 ರಿಂದ 03–11–2007) ರವರೆಗೆ ಅನುಮತಿ ನೀಡಲಾಗಿದ್ದು, ಗುತ್ತಿಗೆದಾರರು ಜುಲೈ 2008 ರವರೆಗೆ ಪಾವತಿಸಿರುವುದಾಗಿ ವರದಿ ಮಾಡುತ್ತಾ, ಗುತ್ತಿಗೆ ಅವಧಿ ನವೀಕರಿಸಲು ವಲಯಾಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಗುತ್ತಿಗೆ ಅವಧಿಯನ್ನು ಪುನಃ ನವೀಕರಿಸಲು ಅರ್ಜಿದಾರರು ಕೋರಿದ್ದು, ದಿನಾಂಕ: 17–04–2007ರ ಮಾರ್ಗಸೂಚಿ ದರಗಳನ್ವಯ ಸ್ವತ್ತಿನ ಮಾರುಕಟ್ಟೆ ದರ ಚದರಡಿ 1ಕ್ಕೆ 2000/– ರೂ. ವಾಣಿಜ್ಯಕ್ಕೆ ಶೇ: 40% ಸೇರಿಸಿದಲ್ಲಿ 2800/– ರೂ. ಗಳಾಗುತ್ತದೆ ಸ್ವತ್ತಿನ ಮೌಲ್ಯ 48 ಚದರಡಿಗಳಿಗೆ 1,34,400/– ರೂ. ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 13,440/– ರೂ. ಮಾಸಿಕ 1120/– ರೂ. ಗಳಾಗುತ್ತದೆ.

ದಿನಾಂಕ: 26–09–2011 ರ ಮಾರ್ಗಸೂಚಿಯಂತೆ ಪರಿಷ್ಕೃತ ದರ ಚದರಡಿ 1 ಕ್ಕೆ 3000/– ರೂ. ಗಳಿದ್ದು, ವಾಣಿಜ್ಯಕ್ಕೆ 40% ಸೇರಿಸಿದಲ್ಲಿ ಚದರಡಿ 1 ಕ್ಕೆ 4200/– ರೂ. ಗಳಾಗುತ್ತದೆ. ಸ್ವತ್ತಿನ ಮೌಲ್ಯ 48 ಚ.ಅ x 4200=201600/– ಗಳಾಗುತ್ತದೆ. ಶೇ: 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 20,160/– ರೂ. ಗಳು ಮಾಸಿಕ 1680/– ರೂ ಗಳಾಗುತ್ತದೆ.

ನಂದಿನಿ ಹಾಲಿನ ಬೂತ್ ಮುಂದುವರೆಯುತ್ತಿದ್ದು, ನಂದಿನಿ ಬೂತ್ ನಡೆಸಲು ಪಾಲಿಕೆಯ ಜಾಗವನ್ನು ಉಪಯೋಗಿಸಿಕೊಂಡಿದ್ದು, ಇದರ ಪೂರ್ಣ ಲಾಭವನ್ನು ಅರ್ಜಿದಾರರು ಪಡೆದಿರುವುದರಿಂದ ಬಿಬಿಎಂಪಿ ಆರ್ಥಿಕ ಹಿತದೃಷ್ಟಿಯಿಂದ ದಿನಾಂಕ: 01–11–2007 ರಿಂದ 30–11–2012ರ ಘಟನೋತ್ತರ ಅವಧಿಗೆ ಆಯಾ ಆರ್ಥಿಕ ವರ್ಷದಲ್ಲಿ ನಿಗಧಿಪಡಿಸಿರುವ ಮಾರುಕಟ್ಟೆ ದರಗಳಂತೆ ಪಾವತಿಸಿಕೊಂಡು ದಿನಾಂಕ: 01–12–2012ರಿಂದ ಮುಂದಿನ 3–ವರ್ಷಗಳ ಅವಧಿಗೆ ನವೀಕರಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ : 13.02.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯ.

**–ಮುಂದೂಡಿದೆ–**

## *10]. ವಿಷಯದ ಸಂಖ್ಯೆ :–ತೆಲಆಸ್ಥಾಸ/248/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/228/12–13, ದಿನಾಂಕ : 27–01–2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ.ಕೋದಂಡರಾಮ ಭಜನ ಮಂಡಳಿರವರಿಗೆ 1ನೇ ಮುಖ್ಯರಸ್ತೆ, ಸಂಪಂಗಿರಾಮನಗರದಲ್ಲಿ ಇರುವ ಮಹಾನಗರ ಪಾಲಿಕೆ ಸೈಟ್ ನಂ.77,78,79 ಮತ್ತು 80ರ 40'*51'.6"=2060 ಚ.ಅಡಿಗಳ ವಿಸ್ತೀರ್ಣವುಳ್ಳ ಜಾಗವನ್ನು ಶ್ರೀ.ಕೋದಂಡರಾಮ ಭಜನ ಮಂಡಳಿಗೆ ಕಲ್ಯಾಣ ಮಂಟಪವನ್ನು ಕಟ್ಟಿಕೊಳ್ಳಲು 30 ವರ್ಷಗಳ ಅವಧಿಗೆ ವಾರ್ಷಿಕ 1000/–ರೂ. ನಿಗಧಿಪಡಿಸಿ, ದಿ:20–05–1977 ರಲ್ಲಿ ಗುತ್ತಿಗೆಗೆ ನೀಡಿದ್ದು, ಈ ಅವಧಿಯು ಮೇ 2007ಕ್ಕೆ ಮುಕ್ತಾಯವಾಗಿರುತ್ತದೆ.

ಶ್ರೀ.ಕೋದಂಡರಾಮ ಭಜನ ಮಂಡಳಿ ದೇವಾಸ್ಥಾನದ ಕಾರ್ಯದರ್ಶಿಯವರು ಅರ್ಜಿಯನ್ನು ಸಲ್ಲಿಸಿ, ಅರ್ಜಿಯ ಜೊತೆಯಲ್ಲಿ ಈ ಹಿಂದೆ ನೀಡಲಾದ ಲೀಸ್ ಅಮೌಂಟ್ ಪ್ರತಿಯನ್ನು ಹಾಗೂ ಲೀಸ್ ಹಣವನ್ನು ಕಟ್ಟಿರುವ ರಸೀದಿ 2011–12ನೇ ಸಾಲಿಗೆ ಕಂದಾಯ ಪಾವತಿ ಮಾಡಿರುವ ರಸೀದಿಗಳನ್ನು ಹಾಜರುಪಡಿಸಿ ಪುನರ್ 30 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ.

ವಲಯಾಧಿಕಾರಿಗಳು ನೀಡಿರುವ ವರಧಿಯಲ್ಲಿ ನಿಗಧಿಪಡಿಸಿರುವ ಗುತ್ತಿಗೆ ಹಣ ವಾರ್ಷಿಕ ರೂ.1000/– ರೂ.ಗಳನ್ನು ಯಾವುದೇ ಬಾಕಿ ಇಲ್ಲದೆ ಪಾವತಿ ಮಾಡಿರುವುದಾಗಿ, ಹಾಗೂ ಸದರಿ ಸ್ವತ್ತಿಗೆ ಕಂದಾಯವನ್ನು

ನಿಗಧಿಪಡಿಸಿಕೊಂಡು ವರ್ಷವರ್ಷಕ್ಕೆ ಕಂದಾಯವನ್ನು ಸಹ 2011–12ರ ವರ್ಷಕ್ಕೆ ಪೂರ್ತಿಯಾಗಿ ಪಾವತಿ ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗದಲ್ಲಿ ಕಲ್ಯಾಣ ಮಂಟಪ ಮತ್ತು ಶ್ರೀ.ಕೋದಂಡರಾಮ ಭಜನ ದೇವಾಸ್ಥಾನವನ್ನು ಕಟ್ಟಿ ಕೆಳವರ್ಗ, ಮಧ್ಯಮವರ್ಗದವರು ಹೆಚ್ಚಾಗಿರುವ ಸಂಪಂಗಿರಾಮನಗರ ನಿವಾಸಿಗಳಿಗೆ ಹೆಚ್ಚು ಅನುಕೂಲವಾಗುವಂತೆ ಸ್ಪಂದಿಸುತ್ತಿರುತ್ತಾರೆ. ಆಗಿಂದಾಗ್ಗೆ ಲೋಕ ಕಲ್ಯಾಣಕೋಸ್ಕರ ದೇವರ ಉತ್ಸವಗಳನ್ನು ಹಾಗೂ ಹೋಮಗಳು, ಉಚಿತ ಮದುವೆಗಳು, ಬಡವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಣೆ ಮಾಡುವುದು ಮುಂತಾದ ಧರ್ಮಕಾರ್ಯಗಳು ನಡೆಯುತ್ತಿರುತ್ತವೆ.

ಸದರಿ ಸ್ವತ್ತಿನ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿ ದರಗಳಂತೆ ಚದರಡಿ 1ಕ್ಕೆ 2500/–ರೂ.ಗಳಿಗದ್ದು, ವಾಣಿಜ್ಯಕ್ಕೆ ಶೆ:40% ಹೆಚ್ಚಿಸಿದಲ್ಲಿ ಚದರಡಿ 1ಕೆ 3500/–ರೂ.ಗಳಾಗುತ್ತದೆ. ಇದರಂತೆ, ಸ್ವತ್ತಿನ ಮೌಲ್ಯ 2060 ಚ.ಅಡಿಗಳಿಗೆ 2060x3500=72,10,000/–ರೂ.ಗಳಾಗುತ್ತದೆ. ದಿನಾಂಕ: 01–03–2002ರ ಮಾರ್ಗಸೂಚಿಯನ್ವಯ ಸ್ವತ್ತಿನ ಒಟ್ಟು ಮೌಲ್ಯದ ಶೇ:10%ರಷ್ಟು ಪರಿಗಣಿಸಿದಾಗ ವಾರ್ಷಿಕ ಗುತ್ತಿಗೆ ಹಣವು 7,21,000/–ರೂ.ಗಳು ಹಾಗೂ ಮಾಸಿಕ 60,084/– ರೂ.ಗಳಾಗುತ್ತದೆ.

ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಮಾರ್ಗಸೂಚಿ ಕ್ರಮ ಸಂಖ್ಯೆ:7(5)ರಂತೆ ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ/ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದು ಸ್ಪಷ್ಟೀಕರಿಸಲಾಗಿದೆ.

ಆದ್ದರಿಂದ, ಶ್ರೀ. ಕೋದಂಡರಾಮ ಭಜನ ಮಂಡಳಿಯವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 20.05.2007 ರಿಂದ 19–05–2037ರವರೆಗೆ ಗುತ್ತಿಗೆ ದರ ನಿಗಧಿಪಡಿಸಿ ನವೀಕರಿಸಲು ಸ್ಥಾಯಿ ಸಮಿತಿಗಳ ಮುಖಾಂತರ ಪಾಲಿಕೆ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಆಯುಕ್ತರ ದಿನಾಂಕ : 27.01.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.19.02.2013ರ ನಿರ್ಣಯವನ್ನು ಒಪ್ಪಲು ಸಮಿತಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ :–ತೆಆಸ್ಥಾಪ/249/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 15–12–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ವಿಭಾಗೀಯ ರೈಲ್ವೆ ಮೇನೇಜರ್ ಬೆಂಗಳೂರು ರವರ ಪತ್ರ ಸಂಖ್ಯೆ.ಬಿ/ಡಬ್ಲ್ಯೂ/277/ಎಲ್.ಎಲ್.ಎಂ/ಬಿ.ಎಂ.ಪಿ. ದಿನಾಂಕ : 21.11.2012ರ ವಿಭಾಗೀಯ ರೈಲ್ವೆ ಮೇನೇಜರ್, ಬೆಂಗಳೂರು ರವರು ದಿ. 21–11–2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ ತಮ್ಮ ಕಛೇರಿಯಿಂದ ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರ ಸಂಖ್ಯೆ.ಕಂಇ 68 ಭೂಸ್ವಾಬೆ ದಿನಾಂಕ : 24.11.2012ರ ಅಡಿಯಲ್ಲಿ ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಉಪ ಆಯುಕ್ತರು (ಭೂಸ್ವಾಧೀನ) ರವರು ಸಂಖ್ಯೆ: ಎಲ್.ಎ.ಕ್ಯೂ/ಪಿ.ಆರ್/02/2012–13 ದಿನಾಂಕ: 06–12–12ರಂದು ಈ ಕಛೇರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವವನ್ನು ಸಲ್ಲಿಸಲು ಕೋರಿರುತ್ತಾರೆ.

ಬೆಂಗಳೂರಿನ ಓಕಳಿಪುರಂ ಜಂಕ್ಷನ್‌ನಿಂದ ಫೌಂಟೇನ್ ವೃತ್ತದವರೆಗೆ ಹೊಸ ಕಾರಿಡಾರ್ ನಿರ್ಮಾಣ ಮಾಡಿ ಕೇಂದ್ರ ಸ್ಥಾನದಲ್ಲಿ ಸಿಗ್ನಲ್ ರಹಿತ ಜಂಕ್ಷನ್ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ರೈಲ್ವೆ ಇಲಾಖೆಯ ಸುಮಾರು 12818.00 ಚ ಮೀ ಜಾಗವನ್ನು Land Exchange ಆಧಾರದ ಮೇಲೆ ಪಡೆದು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಿದ್ದಪಡಿಸಲಾಗಿತ್ತು. ಅದರಂತೆ ಸರ್ಕಾರಕ್ಕೆ ಅನುಮೋದನೆಯನ್ನು ಕೋರಲಾಗಿತ್ತು ದಿನಾಂಕ: 02–02–2011 ಸಂಖ್ಯೆ ನಅಇ 547 ಎಂಎನ್‌ವೈ 2010 ರಲ್ಲಿ ಸರ್ಕಾರವು ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು. ಸದರಿ ಸರ್ಕಾರಿ ಆದೇಶದಲ್ಲಿ ತಿಳಿಸಿದಂತೆ Land Exchange ಆಧಾರದಂತೆ

ವಿಭಾಗೀಯ ರೈಲ್ವೆ ಮೇನೇಜರ್, ಬೆಂಗಳೂರು ರವರು ದಿ: 21-11-2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಘನಸರ್ಕಾರದವರು ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರ ಸಂಖ್ಯೆ.ಕಂಇ 68 ಭೂಸ್ವಾಬೆ ದಿನಾಂಕ : 24.11.2012ರನ್ವಯ ಆಯುಕ್ತರು, ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಊಪ ಆಯುಕ್ತರು (ಭೂಸ್ವಾಧೀನ) ರವರು ಸಂಖ್ಯೆ: ಎಲ್.ಎ.ಕ್ಯೂ/ಪಿ.ಆರ್/02/2012-13 ದಿನಾಂಕ: 06-12-12ರಂದು ಈ ಕಛೇರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಮಾನ್ಯ ಶ್ರೀ.ಎಸ್.ಸುರೇಶ್‌ಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಬೆಂಗಳೂರು ರವರ ಪತ್ರ ಸಂಖ್ಯೆ : ನಕಾಸಂ/2203/2012-13, ದಿನಾಂಕ : 03012.2012ರಲ್ಲಿ ಮಾನ್ಯ ಶ್ರೀ. ಎಸ್ ಸುರೇಶ್‌ಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ರವರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಬೆಂಗಳೂರು ನಗರದ ಪಶ್ಚಿಮ ಭಾಗದಿಂದ ಬೆಂಗಳೂರು ಕೇಂದ್ರ ಭಾಗಕ್ಕೆ ಬರುವ ವಾಹನಗಳಿಗೆ ಎದುರಾಗುವ ಪ್ರಮುಖ ಸಂಚಾರ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಓಕಳಿಪುರಂ ತಡೆರಹಿತ ಸಿಗ್ನಲ್ ಕಾರಿಡಾರ್‌ನನ್ನು ನಿರ್ಮಾಣ ಮಾಡಲು ಈಗಾಗಲೇ ಸರ್ಕಾರದ ಅನುಮೋದನೆ ದೊರೆತಿದ್ದು, ಮೆ॥ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿ. ಸಂಸ್ಥೆಗೆ ಆದೇಶ ನೀಡಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಓಕಳಿಪುರಂ ತಡೆರಹಿತ ಸಿಗ್ನಲ್ ಕಾರಿಡಾರ್ ಕಾಮಗಾರಿಯನ್ನು ಪ್ರಾರಂಭ ಮಾಡಲು ಮಾನ್ಯ

ಮುಖ್ಯ ಮಂತ್ರಿಗಳು ದಿ: 20-12-2012ರಂದು ಈ ಯೋಜನೆಯ ಭೂಮಿ ಪೂಜೆ ಮಾಡಲು ಒಪ್ಪಿಗೆಯನ್ನು ನೀಡಿದ್ದು, ಹಾಗೂ ಈ ದಿನದಂದು ನಡೆಯಲಿರುವ ಭೂಮಿಪೂಜೆ ಕಾರ್ಯಕ್ರಮಕಾಗಿ ಎಲ್ಲಾ ಸಿದ್ದತೆಯನ್ನು ಕೈಗೊಳ್ಳಲು ತಿಳಿಸಿದ್ದು, ಈಗಾಗಲೇ ಪಾಲಿಕೆ ವತಿಯಿಂದ ಭೂಮಿಪೂಜೆ ಕಾರ್ಯಕ್ರಮ ಮಾಡಲು ಸಿದ್ದತೆಯನ್ನು ಮಾಡಕೊಳ್ಳಲಾಗುತ್ತಿದೆ.

ಸದರಿ ಯೋಜನೆಯ ಬಗ್ಗೆ ನೈರುತ್ಯ ರೈಲ್ವೆ ಇಲಾಖೆಯೊಂದಿಗೆ Land Sharing ಬಗ್ಗೆ M.O.U ಮಾಡಿಕೊಳ್ಳಬೇಕಾಗಿದ್ದು ಈ ಬಗ್ಗೆ ಈಗಾಗಲೇ ಕರಡು M.O.U ವನ್ನು ಕಳುಹಿಸಲು ಕೋರಿ ನೈರುತ್ಯ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ ಈ ಸಂಧರ್ಭದಲ್ಲಿ ವಿಭಾಗೀಯ ರೈಲ್ವೆ ಮೇನೇಜರ್ (ನೈರುತ್ಯ ರೈಲ್ವೆ) ಇಲಾಖೆಯವರು ಈ ಕಾರಿಡಾರ್ ಯೋಜನೆಗಾಗಿ ನೀಡುತ್ತಿರುವ 12818.00 ಚ.ಮೀ. ರೈಲ್ವೆ ಜಾಗದ ಬದಲಿಗಾಗಿ ಬಿನ್ನಿಮಿಲ್ ಜಾಗದಲ್ಲಿನ 12818.00 ಚ. ಮೀ ಜಮೀನನ್ನು ರೈಲ್ವೇ ನಿಲ್ದಾಣ ವಿಸ್ತೀರ್ಣ ಕಾರ್ಯಕ್ಕೆ ನೀಡಲು ಕೋರಿ ದಿ: 21-11-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ ತಮ್ಮ ಕಚೇರಿಯಿಂದ ಮೇಲ್ಕಂಡ ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರ ಸಂಖ್ಯೆ.ಕಂಇ 68 ಭೂಸ್ವಾಬೆ ದಿನಾಂಕ : 24.11.2012ರನ್ವಯ ಆಯುಕ್ತರು, ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಉಪ ಆಯುಕ್ತರು (ಭೂಸ್ವಾಧೀನ) ರವರು ಸಂಖ್ಯೆ: ಎಲ್.ಎ.ಕ್ಯೂ/ಪಿ.ಆರ್/02/2012-13 ದಿನಾಂಕ: 06-12-12ರಂದು ಈ ಕಛೇರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಲು ಕೋರಿರುತ್ತಾರೆ.

ಈ ಸಂಬಂಧ ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-2) ದಿನಾಂಕ 07-12-2012ರಂದು ಸಂಬಂಧಪಟ್ಟ ಪಾಲಿಕೆಯ ಕಂದಾಯ, ಕಾಮಗಾರಿ ಇಲಾಖೆಯ ಹಾಗೂ ನೈರುತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಿದಾಗ ಪಾಲಿಕೆಯ ಸರ್ವೆಯರ್ (ಆಸ್ತಿಗಳು) ರವರು ತಯಾರಿಸಿರುವ ನಾಕಾಶೆಯಲ್ಲಿ ತಿಳಿಸಿದಂತೆ ನೈರುತ್ಯ ರೈಲ್ವೆ ಇಲಾಖೆಯವರು ಕೋರಿರುವ ಬಿನ್ನಿಮಿಲ್ ಜಾಗ (ಪಾಲಿಕೆಯ ದಾಖಲಾತಿಯಲ್ಲಿ M/s S.V.Global mill limited ರವರ ಹೆಸರಿನಲ್ಲಿ ನೊಂದಾವಣಿಯಾಗಿರುತ್ತದೆ) ಒಟ್ಟು ವಿಸ್ತೀರ್ಣ ದ 12818.0 ಚ.ಮೀ ಅಥವಾ 1,37,972,95 ಚ. ಅ ಜಾಗವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: CVC-19/2010-11 Bangalore ದಿ: 21-

09–2011ರಂತೆ ಬಿನ್ನಿಮಿಲ್ ರಸ್ತೆಯಲ್ಲಿ ಅಂದಾಜು ಮಾರುಕಟ್ಟೆ ಮೊತ್ತ ರೂ. 3000.00/ ಚ. ಅಡಿಗೆ ಇದ್ದು ಈ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಬೇಕಾದ ಬಿನ್ನಿಮಿಲ್ (ಪಾಲಿಕೆಯ ದಾಖಲಾತಿಯಲ್ಲಿ S.V.Global mill limited ರವರ ಹೆಸರಿನಲ್ಲಿ ನೊಂದಾವಣಿಯಾಗಿರುತ್ತದೆ) ಜಾಗದ ವಿಸ್ತೀರ್ಣವಾದ 1,37,972,95 ಚ. ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ. 58,79,14,767.00 (ಐವತ್ತೆಂಟು ಕೋಟಿ ಎಪ್ಪತ್ತೊಂಬತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು) ಗಳಾಗಿದ್ದು, ಈ ಭೂಸ್ವಾಧೀನದ ಮೊತ್ತವನ್ನು ಸ್ಥಳೀಯ ಕಾಟನ್‌ಪೇಟೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ಧೃಡಿಕರಿಸಿರುತ್ತಾರೆ ಹಾಗೂ ಪಾಲಿಕೆಯ ಸರ್ವೆಯರ್ (ಆಸ್ತಿಗಳು) ರವರು ತಯಾರಿಸಿರುವ ನಕಾಶೆಯನ್ನು ದೃಡೀಕೃತ ಮಾಡಿ ಹಾಗೂ ಕಂದಾಯ ಇಲಾಖೆಯಿಂದ ಈ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿದ್ದು ಸದರಿ ಭೂಸ್ವಾಧೀನದ ಪ್ರಸ್ತಾವನೆಗೆ ಆಯುಕ್ತರ ಕಛೇರಿಯಿಂದ ಅನುಮೋದನೆ ನೀಡಿರುತ್ತದೆ.

ಭೂ ಪರಿಹಾರ ವೆಚ್ಚ

ಭೂಸ್ವಾಧೀನಪಡಿಸಕೊಳ್ಳುವ ವಿಸ್ತೀರ್ಣ 137972.95 ಚ. ಅಡಿ

ಮಾರ್ಗಸೂಚಿ ಬೆಲೆ –1,37,972.95x3000.0=41,39,18,850.00

(ರೂ 3000.00/– ಒಂದು ಚದರ ಅಡಿಗೆ)

ಭೂಸ್ವಾಧೀನ ಕಾಯ್ದೆ 1894 ರ 23 (1)ಎ ಶೆಕಡ 12% ರ ಹೆಚ್ಚುವರಿ ಮಾರುಕಟ್ಟೆ ಬೆಲೆ – 4,96,70,262.00
ಭೂಸ್ವಾಧೀನ ಕಾಯ್ದೆಯ 1894ರ 23 (2)ರ ಅನ್ವಯ ಶೇಕಡಾ 30% ರ ಶಾಸನಬದ್ಧ ಭತ್ಯೆ– 12,41,75,655.00

ಒಟ್ಟು ಮೊತ್ತ– 58,77,64,767.00

ಸಿಬ್ಬಂದಿ ವೆಚ್ಚ ಶೇಕಡ 10% ರಂತೆ – ಇಲ್ಲ

ಆಡಿಟ್ ವೆಚ್ಚ ಶೇಕಡ 1% ರಂತೆ – ಇಲ್ಲ

ಪ್ರಕಟಣೆ ವೆಚ್ಚ – 1.50.000.00

**ಒಟ್ಟು ಮೊತ್ತ - ರೂ 58.79,14,767.00**

ಮೇಲ್ಕಂಡ ಭೂಸ್ವಾಧೀನ ಮಾಡಿಕೊಳ್ಳಬೇಕಾದ ಬಿನ್ನಿಮಿಲ್ ಜಾಗದ ವಿಸ್ತೀರ್ಣವಾದ 1,37,972.95 ಚ. ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ. 58.79,14,767.00ಗಳನ್ನು (ಐವತ್ತೇಂಟು ಕೋಟಿ ಎಪ್ಪತ್ತೊಂಬತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು) ಪಾಲಿಕೆಯು ಈಗ ಇರುವ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟಸಾದ್ಯತೆ ಇರುವುದರಿಂದ ಸದರಿ ಸ್ವಾಧೀನ ಮೊತ್ತವಾದ ರೂ. 58.79,14,767.00 ಗಳನ್ನು ಘನ ಸರ್ಕಾರದ Infrastructure cess (ಮೂಲಭೂತ ಸೌಕರ್ಯ ನಿಧಿ) ಯಿಂದ ಭರಿಸಲು ಮೇಲ್ಕಂಡ ಆಯುಕ್ತರ ಆದೇಶದ ಸಂಖ್ಯೆ ಪಿ.ಎಸ್.ಆರ್.(ಜಿ)7437/12–13, ದಿನಾಂಕ : 17–12–12ರಲ್ಲಿ ಆಯುಕ್ತರ ಕಚೇರಿಯಿಂದ ಘನ ಸರ್ಕಾರವನ್ನು ಕೋರಲು ಅನುಮೋದನೆ ನೀಡಲಾಗಿದೆ.

ಪಾಲಿಕೆಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಭೂಸ್ವಾಧೀನ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆದು ತದ ನಂತರ ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು 20.12.2012ರಂದು ಈ ಯೋಜನೆಯ ಭೂಮಿಪೂಜೆ ಮಾಡಲು ಒಪ್ಪಿಗೆಯನ್ನು ನೀಡಿದ್ದು ಹಾಗೂ ಈ ದಿನದಂದು ನಡೆಯಲಿರುವ ಭೂಮಿಪೂಜೆ ಕಾರ್ಯಕ್ರಮಕ್ಕಾಗಿ ಎಲ್ಲಾ ಸಿದ್ದತೆಯನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಆದುದರಿಂದ ತುರ್ತಾಗಿ ಭೂಸ್ವಾಧೀನಪಡಿಸಿಕೊಂಡು ರೈಲ್ವೆಯವರಿಗೆ ಹಸ್ತಾಂತರ ಮಾಡಿಕೊಂಡಬೇಕಾಗಿರುವುದರಿಂದ ಸದರಿ ಭೂಸ್ವಾಧೀನ ಪ್ರಸ್ತಾವನೆಯನ್ನು ಅನುಮೋದಿಸುವ ಪ್ರಾಧಿಕಾರವು ಘನ ಸರ್ಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

1) ನೈರುತ್ಯ ರೈಲ್ವೆ ಇಲಾಖೆಯವರು ಕೋರಿರುವ ಬಿನ್ನಿಮಿಲ್ ಜಾಗ (ಪಾಲಿಕೆಯ ದಾಖಲಾತಿಯಲ್ಲಿ M/s S.V.Global mill limited ರವರ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ.) ಒಟ್ಟು ವಿಸ್ತೀರ್ಣದ 12818.0

ಚ.ಮೀ ಅಥವಾ 1.37.921.68 ಚ. ಅಡಿ ಜಾಗವನ್ನು ನೋಂದಣೀ ಮತ್ತು ಮುದ್ರಾಂಕ ಇಲಾಖೆಯವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ CVC-19/2010-11 Bangalore ದಿ: 21–09–2011 ರಂತೆ ಬಿನ್ನಿಮಿಲ್ ರಸ್ತೆಯಲ್ಲಿ ಅಂದಾಜು ಮಾರುಕಟ್ಟೆ ಮೊತ್ತ ರೂ. 3000.00/– ಚ. ಅಡಿಗೆ ಇದ್ದು, ಈ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಬೇಕಾದ ಬಿನ್ನಿಮಿಲ್ (ಪಾಲಿಕೆಯ ದಾಖಲಾತಿಯಲ್ಲಿ S.V.Global mill limited ರವರ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ) ಜಾಗದ ವಿಸ್ತೀರ್ಣವಾದ 1,37,921.68 ಚ.ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ. 58.79,14,767.00 ಗಳು ( ಐವತ್ತೆಂಟು ಕೋಟಿ ಎಪ್ಪತ್ತೊಂಬತ್ತು ಲಕ್ಷದ ಹದಿನಾಲ್ಕು ಸಾವಿರದದ ಏಳು ನೂರ ಅರವತ್ತೇಳು ರೂಪಾಯಿಗಳು) ಈ ಮೊತ್ತವನ್ನು ಈಗ ಇರುವ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟಸಾಧ್ಯತೆ ಇರುವುದರಿಂದ ಸದರಿ ಸ್ವಾಧಿನ ಮೊತ್ತವಾದ ರೂ. 58.79,14,767.00ಗಳನ್ನು ಭರಿಸಲು ಘನ ಸರ್ಕಾರದ Infrastructure cess (ಮೂಲಭೂತ ಸೌಕರ್ಯ ನಿಧಿ) ಯಿಂದ ಭರಿಸಲು ಘನ ಸರ್ಕಾರವನ್ನು ಕೋರಿದೆ.

ಸದರಿ ಭೂಸ್ವಾಧೀನ ಪ್ರಕ್ರಿಯೆಯ ಪ್ರಸ್ತಾವನೆಯನ್ನು ಅನುಮೋದಿಸುವ ಆರ್ಥಿಕ ಪ್ರಾಧಿಕಾರವು ಸ್ಥಾಯಿ ಸಮಿತಿ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆದು ತದ ನಂತರ ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ ಆದರೆ ತುರ್ತಾಗಿ ಭೂಸ್ವಾಧೀನಪಡಿಸಿಕೊಂಡು ನೈರುತ್ಯ ರೈಲ್ವೆ ಯವರಿಗೆ ಹಸ್ತಾಂತರ ಮಾಡಬೇಕಾಗಿರುವುದರಿಂದ ಭೂಸ್ವಾಧೀನ ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ಸಲ್ಲಿಸಲು ಹಾಗೂ ಪ್ರಸ್ತಾವನೆಯನ್ನು ನೇರವಾಗಿ ಘನ ಸರ್ಕಾರಕ್ಕೆ ಸಲ್ಲಿಸಲು ತೆಗೆದುಕೊಂಡಿರುವ ಕ್ರಮವನ್ನು ಸ್ಥಿರೀಕರಿಸಲು ಆದೇಶ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಆಯುಕ್ತರ ದಿನಾಂಕ : 15–12–12ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.19.02.2013ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/250/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 04.03.2013 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ : 61ರ ದೇವರ ಜೀವನಹಳ್ಳಿಯಲ್ಲಿರುವ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗೆ ಹಾಗೂ ಹೈಸ್ಕೂಲ್ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪಿ–0475 ಅಡಿಯಲ್ಲಿ ಒಟ್ಟು 7 ಕಾಮಗಾರಿಗಳ ಅಂದಾಜು ಮೊತ್ತ ರೂ.14.00 ಲಕ್ಷಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ದಿನಾಂಕ : 21.02.2013ರಂದು ಅನುಮೋದನೆ ನೀಡಿರುತ್ತಾರೆ.

ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿರುವುದರಿಂದ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರು ಕೆಳಕಂಡ 07 ಕಾಮಗಾರಿಗಳಿಗೆ ರೂ.14.00 ಲಕ್ಷಗಳ ಅಂದಾಜು ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಪಟ್ಟಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Improvements to Anganawadi Building at D.J.Halli Play Ground in Ward No.61 | 2.00 |
| 2 | Providing and Raising of Compound Wall Southern Side to D.J.Halli Play Ground in Ward No.61 | 2.00 |
| 3 | Providing Chain Link fencing over the existing compound wall Northern Side at D.J.Halli Play Ground in Ward No.61 | 2.00 |
| 4 | Providing Chain Link fencing over the existing compound wall Southern Side at D.J.Halli Play Ground in Ward No.61 | 2.00 |
| 5 | Improvement to D.J.Halli Play Ground (Western Side) in Ward No.61 | 2.00 |

| | | |
|---|---|---|
| 6 | Improvement to D.J.Halli Play Ground (Northern Side) in Ward No.61 | 2.00 |
| 7 | Improvement to D.J.Halli Play Ground (Eastern Side) in Ward No.61 | 2.00 |
| **Total** | | **14.00** |

ಮೇಲ್ಕಂಡ 07 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.14.00 ಲಕ್ಷಗಳನ್ನು ಪಿ–0475ರ ಅನುದಾನದ ಅಡಿಯಲ್ಲಿ ಕೈಗೊಳ್ಳಲು ಅನುಮೋದನೆ ಕೋರಿ ಸಲ್ಲಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರ ದಿ.04.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *13]. ವಿಷಯದ ಸಂಖ್ಯೆ :–ತೆಲಆಸ್ಥಾಸ/251/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 01.03.2013 ರಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ. ಜಾಹೀರಾತು ಬೈಲಾ–2006ಕ್ಕೆ ತಿದ್ದುಪಡಿಯಲ್ಲಿ ದಲಿತರಿಗೆ ಜಾಹೀರಾತು ಶುಲ್ಕ ಹಾಗೂ ತೆರಿಗೆ ವಿನಾಯಿತಿಯನ್ನು ಪ್ರಾಯೋಗಿಕವಾಗಿ ನೀಡಲು ರಾಜ್ಯಾಧ್ಯಕ್ಷರು, ಕರ್ನಾಟಕ ದಲಿತ ಕೈಗಾರಿಕೋದ್ಯಮಿಗಳ ಒಕ್ಕೂಟ ರವರು ನಗರಾಭಿವೃದ್ಧಿ ಇಲಾಖೆಗೆ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಹಾಗೂ ಬಿ.ಬಿ.ಎಂ.ಪಿ.ಗೆ ಮನವಿ ಸಲ್ಲಿಸಿ ಈ ಕೆಳಕಂಡ ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ ಮತ್ತು ಇದೇ ರೀತಿ ಪರಿಶಿಷ್ಟ ಜಾತಿಯವರಿಗೆ ಇತರ ಇಲಾಖೆಗಳಲ್ಲಿ ರಿಯಾಯಿತಿ ನೀಡಿರುವ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

1. ಈ ಯೋಜನೆಯನ್ನು ಪ್ರಥಮದಲ್ಲಿ 20 ವರ್ಷಗಳವರೆಗೆ ಜಾಹೀರಾತು ಶುಲ್ಕ ಅಥವಾ ತೆರಿಗೆ ವಿನಾಯತಿ ನೀಡಿ ನಂತರ ಪ್ರತಿ ವರ್ಷ ಶೇ.5ರಂತೆ ಶುಲ್ಕ ವಿಧಿಸುವುದು (ನಿಗದಿತ ಶುಲ್ಕದ ದರ ತಲುಪುವವರೆಗೆ)
2. ಪಾಲಿಕೆಯ ಸ್ವತ್ತು, ರಸ್ತೆ, ಪಾದಚಾರಿ ಮಾರ್ಗ ಮತ್ತು ಇನ್ನಿತರೇ ಜಾಗಗಳಲ್ಲಿ ಅಳವಡಿಸುವ ಎಲ್ಲಾ ರೀತಿಯ ಜಾಹೀರಾತು ಫಲಕಗಳು ಅಂದರೆ ಪೋಲ್ ಕಿಯಾಸ್ಕ್, ರೋಡ್ ಮೀಡಿಯನ್ಸ್, ಬಸ್ ಶೆಲ್ಟರ್ಸ್ ಇತ್ಯಾದಿಗಳಲ್ಲಿ ಮೀಸಲಾತಿಯ ಪಾಲು ನೀಡಬೇಕು. ಇದರಲ್ಲಿಯು ಸಹ ನೆಲಬಾಡಿಗೆ ಮತ್ತು ಜಾಹೀರಾತು ಶುಲ್ಕ ಅಥವಾ ತೆರಿಗೆ ವಿನಾಯತಿ ನೀಡಬೇಕು.
3. ಪಾಲಿಕೆಯ ಸ್ವತ್ತುಗಳಲ್ಲಿ ವಿಶೇಷವಾಗಿ ಯುನಿಪೋಲ್ ಅಳವಡಿಸಿರುವುದಕ್ಕೆ ಅವಕಾಶ ನೀಡುವುದು.
4. ಜಾಹೀರಾತು ಏಜೆನ್ಸಿ ನವೀಕರಣಕ್ಕೆ ರೂ.15000/–ಗಳ ಶುಲ್ಕವನ್ನು ನಿಗಧಿಪಡಿಸಿದ್ದು, ಪ.ಜಾ/ಪ.ಪಂ ರವರಿಗೆ ರೂ.2500/–ಗಳನ್ನು ನಿಗಧಿಪಡಿಸಬೇಕು.
5. ನೆಲದ ಮೇಲೆ ಅಥವಾ ಕಟ್ಟಡಗಳ ಮೇಲೆ ಎರಡು ಫಲಕಗಳನ್ನು ಅಕ್ಕಪಕ್ಕದಲ್ಲಿ ಒಬ್ಬ ಫಲಾನುಭವಿಯೇ ಅಳವಡಿಸಿಕೊಳ್ಳಲು ಮೀಸಲಾತಿಯನ್ವಯ ಸರ್ಕಾರದ ಇತರೆ ಇಲಾಖೆಗಳು ಅನುಮತಿ ನೀಡಿದರೆ ಅದಕ್ಕೆ ಅವಕಾಶ ನೀಡಬೇಕು ಮತ್ತು ಅಂತರವನ್ನು ವಿಧಿಸಬಾರದು.
6. ಮೀಸಲಾತಿ ಅನ್ವಯ ಅಳವಡಿಸಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾವಣೆ ಮಾಡಬೇಕಾದ ಸಂದರ್ಭದಲ್ಲಿ ಇವುಗಳಿಗೆ ಶುಲ್ಕ ವಿಧಿಸಬಾರದು.
7. ಈ ಮೇಲೆ ಕೋರಿರುವ ವಿನಾಯಿತಿಗಳು ಅತ್ಯವಶ್ಯಕವಾಗಿದೆ. ನಾವುಗಳು ಹಿಂದಿನಿಂದಲೂ ಕಸ ಅಥವಾ ಹೊಲಸು ಎತ್ತುವ ಕಾಯಕದಿಂದ ಬಂದವರು, ಈಗಾಗಲೇ ಸಾವಿರಾರು ಕೋಟಿ ಲಾಭ ಮಾಡಿ ಪಾಲಿಕೆಗೆ ಸಾವಿರಾರು ಕೋಟಿ ರೂಪಾಯಿಗಳಿಗೆ ಪಂಗನಾಮ ಹಾಕಿ ಕಪ್ಪು ಪಟ್ಟಿಗೆ ಸೇರ್ಪಡೆಯಾಗಬೇಕಾದವರ ಮಧ್ಯೆ ಜಾಹೀರಾತು ವಹಿವಾಟು ನಡೆಸುವುದು ಸುಲಭದ ಮಾತಲ್ಲ. ಆದುದರಿಂದ 20 ವರ್ಷಗಳ ಕಾಲ ಶುಲ್ಕ ಅಥವಾ ತೆರಿಗೆ ವಿನಾಯಿತಿ ನೀಡುವುದು ನ್ಯಾಯಯುತವಾಗಿರುತ್ತದೆ.
8. ಸರ್ಕಾರಿ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002 ರನ್ವಯ ಪಾಲಿಕೆಯ ಜಮೀನುಗಳನ್ನು ಶೇ.25ರ ದರಕ್ಕೆ ಮಾರಾಟ ಮಾಡುವುದಕ್ಕೆ ಸರ್ಕಾರ ಅವಕಾಶ ನೀಡಿರುತ್ತದೆ. ಅದರಂತೆ ಈ ಜನರಿಗೆ ಜಾಹೀರಾತಿನಲ್ಲಿ ವಿನಾಯಿತಿ ನೀಡಿದರೆ ಯಾವುದೇ ರೀತಿಯ ತೊಂದರೆ ಆಗಿರುವುದಿಲ್ಲ.
9. ಜಾಹೀರಾತು ಬೈಲಾ–2006, ಭಾಇ–2 ಉಪ ವಿಧಿ 3(ಎಲ್) (iii) ರನ್ವಯ "ಎ" ವಲಯದಲ್ಲಿ ವಿಶೇಷ ಸಂದರ್ಭಗಳಲ್ಲಿ ಪಾಲಿಕೆ ಹಿತದೃಷ್ಟಿಯಿಂದ ಆಯುಕ್ತರು ಪರಿಶೀಲಿಸಿ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಬಹುದು ಎಂದು ತಿಳಿಸಿದೆ. ಇದರನ್ವಯ "ಎ" ವಲಯದಲ್ಲಿ ಪರಿಶಿಷ್ಟ ಜಾತಿಯವರಿಗೆ ವಿಶೇಷ ಪ್ರಕರಣ ಎಂದು ಅವಕಾಶ ನೀಡಬಹುದಾಗಿದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು.
10. ಈ ಸೌಲಭ್ಯವನ್ನು ಪರಿಶಿಷ್ಟ ಜಾತಿಯವರು ಆರಂಭಿಸಿರುವ ಸಂಘ ಸಂಸ್ಥೆಗಳಿಗೆ ಮೊದಲ ಆದ್ಯತೆ ಮೇಲೆ ನೀಡುವುದು, ಈ ಜನರೇ ನೊಂದಾಯಿಸಿರುವ ಸಂಘ–ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನಮಾನ ಹೊಂದಿರುವ ಪದಾಧಿಕಾರಿ ಮತ್ತು ಸದಸ್ಯರಾಗಿರುವವರಿಗೆ ಮಾತ್ರ ಅನ್ವಯವಾಗುವಂತೆ ಮತ್ತು ಈ ಸೌಲಭ್ಯ

ಈ ಆದೇಶ ಮಾಡುವ ಮೊದಲು ನೊಂದಣೆಯಾಗಿ, ಅದರಲ್ಲಿ ಸದಸ್ಯರಾಗಿದ್ದು ಆ ಸಮಯದಲ್ಲಿ ಜಾಹೀರಾತು ವಹಿವಾಟಿನಲ್ಲಿ ವ್ಯವಹರಿಸಿದವರಿಗೆ ಮಾತ್ರ ಎಂಬುದಾಗಿ ನಿಗಧಿಪಡಿಸಬೇಕು. ಇದರಿಂದ ಇವರ ಹೆಸರಿನಲ್ಲಿ ಮತ್ತೊಬ್ಬರು ಈ ವಿನಾಯಿತಿ ಸೌಲಭ್ಯ ಕಬಳಿಸುವುದನ್ನು ತಡೆಯಬಹುದು. ಈಗಾಗಲೇ ಸುಳ್ಳು ಜಾತಿ ಪತ್ರ ಪಡೆದು ಹಲವಾರು ರೀತಿಯ ದುರುಪಯೋಗ ಆಗಿರುವುದರಿಂದ ಕಂದಾಯ ಸಚಿವಾಲಯ ಹಾಗೂ ಇನ್ನಿತರ ಇಲಾಖೆಗಳು ಈ ಜನರೆ ಆರಂಭಿಸಿರುವ ಸಂಘ–ಸಂಸ್ಥೆಗಳಿಗೆ ಆದ್ಯತೆ ನೀಡಲಾಗಿದೆ.

ಆದುದರಿಂದ ಕೆಲವು ಸಂಸ್ಥೆಗಳಿಗೆ ಸರ್ಕಾರದಿಂದ ತೆರಿಗೆ ವಿನಾಯಿತಿ ನೀಡಲಾಗಿದ್ದು, ಅವು ಯಾವುವೆಂದರೆ, ಮೆ॥ ಟಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈ.ಲಿ., ಬಿಡದಿ, ರಾಮನಗರ ಜಿಲ್ಲೆ. ರವರಿಗೆ ವಿನಾಯಿತಿ ನೀಡಲಾಗಿದ್ದು, ಇದರಂತೆ ಪರಿಶಿಷ್ಟ ಜಾತಿ/ಪಂಗಡದವರಿಗೆ **FUNDAMENTAL RIGHTS PART-III Sec. 15, PROHIBITION OF DISCRIMINATION ON GROUNDS OF RELIGION, RACE, CASTE, SEX OR PLACE OF BIRTH :-**

1) **The State shall not discriminate against any citizen on grounds only of relegion, race, caste, sex, place of birth or any of them.**
2) **No citizen shall, on grounds only of religion, race, caste, sex, place of birth or any of them, be subject to any disability, liability, restriction or condition with regard to:-**
   (a) **Access to shops, public restaurants, hotels and places of public entertainment: or**
   (b) **The use of wells, tanks, bathing ghats, roads and places of public resort maintained wholly or partly out of state funds or dedicated to the use of the general public.**
3) **Nothing in this article shall prevent the State from making any special provision for women and children.**
4) **Nothing in this article or in clause (2) of article 29 shall prevent the State from Making any special provision for the advancment of any socialyy and educationally backward classes of citizens or for the Scheduled Castes and the Scheduled Tribes.**
5) **Nothing in this article or in sub-clause (g) of clause (1) of article 19 shall prevent the State from making any special provision, by law, for the advancement of any socially and educationally backward classes of citizens or for the Scheduled Castes or the Secheduled Tribes in so far as such special provisions relate to their admission to educational institution including private educational institution, whether aided or unaided by the State, other than the minority educational institutions referred to in clause (1) of article 30.**

ACTION POINTS FOR DEVELOPMENT OF SCHEDULED CASTES & SCHEDULED TRIBES, PLANNING COMMISSION, GOVT. OF INDIA

43) **There should be 25% reservation in all licenses, permits, agencies, dealerships and contracts issued by the government. Conditions like advance security deposit should be relaxed.**

ಈ ಮೇಲ್ಕಂಡ ಆದೇಶದಂತೆ ಜಾಹೀರಾತು ವಿಷಯಗಳಿಗೆ ಸಂಬಂಧಿಸಿದಂತೆ ವಿನಾಯಿತಿ ನೀಡಲು ಕೋರಿರುತ್ತಾರೆ.

ಈ ಸಂಬಂಧ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯಲ್ಲೂ ಚರ್ಚಿಸಲಾಗಿದ್ದು, ಚರ್ಚೆಯ ವೇಳೆಯಲ್ಲಿ ಸದರಿ ಸಂಸ್ಥೆಯವರ ಮನವಿ ಬಗ್ಗೆ ಪರಿಶೀಲಿಸಿ ನಗರ ಪಾಲಿಕೆಯಲ್ಲಿ ಅನುಮತಿ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಬಹುದೆಂದು ತಿಳಿಸಿರುತ್ತಾರೆ.

ಕರ್ನಾಟಕ ದಲಿತ ಕೈಗಾರಿಕೋದ್ಯಮಿಗಳ ಒಕ್ಕೂಟ ರವರ ಈ ಮೇಲ್ಕಂಡ ಮನವಿಯ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ನ್ಯಾಯಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಿದೆ.

**ನಿರ್ಣಯ : ಮಾನ್ಯ ಆಯುಕ್ತರ ದಿ.01.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ***ಹೆಚ್ಚುವರಿ ವಿಷಯಗಳು :-***

## ***01]. ವಿಷಯದ ಸಂಖ್ಯೆ :-ತೆಲಆಸ್ಥಾಸ/252/2012-13***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾತಿಯಾಗಿ ಖಾಲಿ ಇರುವ ಮಂಜೂರಾದ 4,000 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ನಅಇ373ಎಂ.ಎನ್.ವೈ2007, ದಿನಾಂಕ 13.01.2010ರಂತೆ ಈ ಕೆಳಕಂಡಂತೆ ಷರತ್ತಿನನ್ವಯ ಸರ್ಕಾರವು ಅನುಮೋದನೆ ನೀಡಿದೆ.

**ಷರತ್ತುಗಳು:-**

1. ಹುದ್ದೆಗಳ ನೇಮಕಾತಿಯಿಂದ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.
2. ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಾಗ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಿಧಿವಿಧಾನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಸಂಬಂಧ ಬಿ12(ಸಿ&ಆರ್)ಪಿಆರ್/80/2010-11, ದಿನಾಂಕ : 05.09.2012ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರಿಗೆ ವಿದ್ಯಾರ್ಹತೆಯನ್ನು (5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ) ಎಂದು ನಿಗದಿಪಡಿಸುವಂತೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರುವ ಬಗ್ಗೆ ಪತ್ರವನ್ನು ಬರೆಯಲಾಗಿತ್ತು.

ಈ ವಿಷಯವಾಗಿ ನಅಇ223ಎಂ.ಎನ್.ವೈ2011, ದಿನಾಂಕ 26.12.2012ರಂತೆ ಪೌರಕಾರ್ಮಿಕರ ಸಂಘದ ಕೋರಿಕೆಯನ್ನು ಪರಿಗಣಿಸುವ ಕುರಿತಾದ ಅಗತ್ಯತೆಯನ್ನು ಪರಿಶೀಲಿಸಿ, ಜರೂರಾಗಿ ದಿನಾಂಕ:10/09/2012ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬೇಕಾಗಿರುವ ತಿದ್ದುಪಡಿಯ ಕರಡನ್ನು ಜರೂರಾಗಿ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸಿರುತ್ತಾರೆ. ಇದರಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಈ ಕೆಳಕಂಡಂತೆ ತಿದ್ದುಪಡಿಮಾಡಲು ಅನುಮೋದನೆಯನ್ನು ಕೋರಿರುವ ಆಯುಕ್ತರ ದಿನಾಂಕ:01.02.2013ರ ಸಂಖ್ಯೆ:ಸ.ಅ.ನೇ/ಪಿಆರ್/53/2012-13 ರ ಟಿಪ್ಪಣಿ.

| ಹುದ್ದೆಯ ಹೆಸರು | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ | ನೇಮಕಾತಿ ಪ್ರಾಧಿಕಾರದ ಅಧಿಕಾರಿ |
|---|---|---|---|
| ಸ್ಪೆಷಲ್ ಗ್ಯಾಂಗ್‌ಮೆನ್<br>ಎಂ.ಸಿ. ಗ್ಯಾಂಗ್‌ಮೆನ್<br>ಎ.ಎಲ್.ಓ. ಗ್ಯಾಂಗ್‌ಮೆನ್<br>ಸೈನೊಸೀಸ್ ಗ್ಯಾಂಗ್‌ಮೆನ್<br>ಡಿಸ್‌ಇನ್‌ಫೆಕ್ಟೆಂಟ್ ಗ್ಯಾಂಗ್‌ಮೆನ್<br>ಸ್ವೀಪರ್ಸ್ (ಪೌರಕಾರ್ಮಿಕರು) | ನೇರ ನೇಮಕಾತಿ | 5ನೇ ತರಗತಿ ಉತ್ತೀರ್ಣ ಅಥವಾ 7ನೇ ತರಗತಿ ಅನುತ್ತೀರ್ಣ.<br>ಕನ್ನಡ ಭಾಷೆ ಪರಿಜ್ಞಾನವಿರಬೇಕು. | ಆಯುಕ್ತರು (ಕಾರ್ಪೊರೇಷನ್ ಕಾಯ್ದೆ 89ರಡಿಯಲ್ಲಿ) |

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಸಭೆಯ ದಿನಾಂಕ : 25.02.2013ರಂದು ಆಯುಕ್ತರ ದಿನಾಂಕ : 01.02.2013ರ ಪ್ರಸ್ತಾವನೆ ಕುರಿತಂತೆ ಈ ಕೆಳಕಂಡ ನಿರ್ಣಯ ಕೈಗೊಳ್ಳಲಾಗಿದೆ.

(1) ಪೌರಕಾರ್ಮಿಕರ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಅಗತ್ಯ ವಿದ್ಯಾರ್ಹತೆ ನಿಗಧಿಪಡಿಸುವ ಕುರಿತಂತೆ ಕಾನೂನು ಕೋಶದ ಮುಖ್ಯಸ್ಥರ ದಿನಾಂಕ:13.02.2013ರ ಅಭಿಪ್ರಾಯವನ್ನು ಪರಿಗಣಿಸಿ, ಈ ಸಂಬಂಧ ದಿನಾಂಕ:01.02.2013ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(2) 4000 ಮಂದಿ ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವ ಕುರಿತಂತೆ ನೇಮಕಾತಿ ಸಮಿತಿಯ ರಚನೆ ಬಗ್ಗೆ ಸರ್ಕಾರದ ಹಂತದಲ್ಲಿ ಕೂಡಲೇ ವ್ಯವಹರಿಸಿ ಸೂಕ್ತ ಆದೇಶವನ್ನು ಪಡೆಯಲು ಆಯುಕ್ತರನ್ನು ಕೋರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

**ನಿರ್ಣಯ : ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿ.25.02.2013ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ :-ತೆಆಸ್ಥಾಸ/253/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 06.03.2013ರಲ್ಲಿ ವಿವರಿಸಿರುವಂತೆ, ಬೆಂಗಳೂರು ತಮಿಳು ಸಂಘ ರವರ ಪತ್ರ ಸಂಖ್ಯೆ ಬಿಟಿಎಸ್/120/498/2/2012, ದಿನಾಂಕ : 29-12-2012ರ ಪತ್ರದಲ್ಲಿ ಕಂದಾಯ ಅಧಿಕಾರಿ ಶಿವಾಜಿನಗರ ವಿಭಾಗ ವ್ಯಾಪ್ತಿಯ ವಾರ್ಡ್ 90ರಲ್ಲಿ ಪ್ರತಿ ರಂದು ಸಂಕ್ರಾಂತಿ ಹಬ್ಬದ ಮಾರನೇ ದಿನ ಸಂತ ಕವಿ ತಿರುವಳ್ಳುವರ್ ದಿನಾಚರಣೆಯನ್ನು ಆಚರಿಸುತ್ತಿದ್ದು, ಈ ಕಾರ್ಯಕ್ರಮಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.10.00 ಲಕ್ಷಗಳನ್ನು 2012-13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0048 – ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಿಟ್ಟಿರುವ ಸಹಾಯಧನ ಅಡಿಯಲ್ಲಿ ನೀಡಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0048 ಅಡಿಯಲ್ಲಿ ರೂ.10.00 ಲಕ್ಷಗಳ ಅನುದಾನವನ್ನು ಒದಗಿಸುವ ಬಗ್ಗೆ ನಿರ್ಣಯ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮಂಡಿಸಲಾದ ಟಿಪ್ಪಣಿ

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿ.06.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/255/2012-13*

ಆಯುಕ್ತರು ಟಿಪ್ಪಣಿ ದಿನಾಂಕ : 27.02.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.184ರ ಉತ್ತರಹಳ್ಳಿ ವ್ಯಾಪ್ತಿಯ ನೀರು ಸರಬರಾಜು ಕಾಮಗಾರಿಗಳಿಗೆ 2012-13ನೇ ಸಾಲಿನ ಆಯವ್ಯಯದ ಕ್ರಮ ಸಂಖ್ಯೆ -17 ಸಾರ್ವಜನಿಕ ಕಾಮಗಾರಿಗಳು (ವಲಯವಾರು) ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳು ಪಿ-2434 ಶೀರ್ಷಿಕೆ ಅಡಿಯಲ್ಲಿ ಮೀಸಲಿಟ್ಟಿರುವ ರೂ.13000.00 ಲಕ್ಷಗಳ ಅನುದಾನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಸೂಚನೆಯಂತೆ ಉತ್ತರಹಳ್ಳಿ ವಾರ್ಡ್‌ಗಳ ವಿವಿಧ ಬಡಾವಣೆಗಳಲ್ಲಿ 3 ಕಾಮಗಾರಿಗಳಿಗೆ ರೂ.250.00 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. 2012-13ನೇ ಸಾಲಿನ ಆಯವ್ಯಯದ ಕ್ರಮಸಂಖ್ಯೆ-17 ಸಾರ್ವಜನಿಕ ಕಾಮಗಾರಿಗಳು (ವಲಯವಾರು) ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳು ಪಿ-2434 ಶೀರ್ಷಿಕೆ ಅಡಿಯಲ್ಲಿ ಮೀಸಲಿಟ್ಟಿರುವ ರೂ.13000.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ನಂ.184ರ 3 ಕಾಮಗಾರಿಗಳಿಗೆ ತಗಲುವ ವೆಚ್ಚ ರೂ.250.00 ಲಕ್ಷಗಳಿಗೆ ಜಲಮಂಡಳಿ ವತಿಯಿಂದ ಪ್ರಸ್ತಾವನೆಯ ಅನುಮೋದನೆಗೆ ಅಪರ ಆಯುಕ್ತರು ಬೊಮ್ಮನಹಳ್ಳಿ ವಲಯರವರು ಈ ಕಡತದ ಕಂಡಿಕೆ (05)ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯೊಂದಿಗೆ ಮಂಡಿಸುವಂತೆ ಕೋರಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ವಾರ್ಡ್ ನಂ.184ರ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳಿಗೆ 2012-13ನೇ ಸಾಲಿನ ಪಿ-2434 ಶೀರ್ಷಿಕೆ ಅಡಿಯಲ್ಲಿ ಮೀಸಲಿಡಲಾದ ಅನುದಾನದಲ್ಲಿ ರೂ.250.00 ಲಕ್ಷಗಳ 3 ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಜಲಮಂಡಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಕೋರಿ ಟಿಪ್ಪಣಿಯನ್ನು ತಯಾರಿಸಿ ಸಲ್ಲಿಸಿದೆ.

| Sl No | Name of Work | Esimated Cost in lakhs |
|---|---|---|
| 01 | Providing and laying of 300, 150 MM dia W/S Feeder lines and 100 mm dia distribution pipe line at Marthas Hospital road and cross roads Munivenkatappa layout Balaji Nagara etc., Adjacent to KSRTC layout in Ward No.184 | 61.78 |
| 02 | Providing and laying of 100, 150 MM dia W/S line and branching from existing 300mm dia Di W/S Feeder line near Vaishnavi theatre to provide Water Supply fecilities to Sapthagiri layout Adjacent to Maruthi layout in Ward No.184 | 97.23 |
| 03 | Providing and laying of 150, 100 MM dia Di W/S line and branching from existing 300mm dia Di W/S Feeder line near Anjaneya temple to provide Water Supply fecilities to vinayaka layout, Narashamma layout, and its cross roads Vallabha Nagara and Bangarappa layout and its cross roads in Ward No.184 | 90.99 |
| | **Total :** | **250.00** |

**ನಿರ್ಣಯ : ಆಯುಕ್ತರ ದಿ.27.02.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :-ತೆಆಸ್ಥಾಸ/256/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 08.03.2013ರಲ್ಲಿ ವಿವರಿಸಿರುವಂತೆ, 2012-13ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ : 61ರಲ್ಲಿ ಲೆಕ್ಕಶೀರ್ಷಿಕೆ ಪಿ-0607, ಮೂಲಭೂತ ಸೌಕರ್ಯಗಳು (Infrastructure) ಪಾಲಿಕೆ ಆಸ್ತಿಗಳಿಗೆ ಬೇಲಿ ನಿರ್ಮಾಣ (ಪಾರ್ಕ್ ಮತ್ತು ಉದ್ಯಾನಗಳು ಹೊರತುಪಡಿಸಿ) ಅಡಿಯಲ್ಲಿ ರೂ.500.00 ಲಕ್ಷಗಳ ಅನುದಾನ ಲಭ್ಯವಿದ್ದು ಸದರಿ ಅನುದಾನವನ್ನು ಬಳಸಿಕೊಂಡು ಯಶವಂತಪುರ ಹೋಬಳಿ, ನಾಗರಭಾವಿ ಗ್ರಾಮದ ಸರ್ವೆ ಸಂಖ್ಯೆ : 44 ಮತ್ತು 45ರ 11ಗುಂಟೆ (ವಾರ್ಡ್ ಸಂಖ್ಯೆ : 126, ಮಾರುತಿ ಮಂದಿರ ಇಲ್ಲಿನ ಸಂಗೊಳ್ಳಿ ರಾಯಣ್ಣ ಆಟದ ಮೈದಾನ) ಸರ್ಕಾರಿ ಆಸ್ತಿಯ ವಿಚಾರವಾಗಿ ಶ್ರೀಮತಿ ಮಾಲಾ ಬಿನ್ ಡಿ.ಸುಬ್ಬರಾಯುಡು ರವರು ಬೆಂಗಳೂರು ಮಹಾನಗರ ಪಾಲಿಕೆಯನ್ನು ಪ್ರತಿವಾದಿಯನ್ನಾಗಿಸಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ ಸಂಖ್ಯೆ : 1251/2001ರಂತೆ ಮೂಲ ದಾವೆ ಮತ್ತು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಆರ್‌ಎಫ್‌ಎ ಸಂಖ್ಯೆ : 830/2011ರಂತೆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು ಸದರಿ ಪ್ರಕರಣಗಳಲ್ಲಿ ನ್ಯಾಯಾಲಯವು ಪಾಲಿಕೆಯ ಪರವಾಗಿ ತೀರ್ಪು ನೀಡಿರುತ್ತದೆ.

ಸದರಿ ಆಟದ ಮೈದಾನವನ್ನು ಸಂರಕ್ಷಿಸಿಕೊಳ್ಳುವುದು ಮತ್ತು ಅಭಿವೃದ್ಧಿಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದ್ದು ಈಗಾಗಲೇ 2011-12ನೇ ಸಾಲಿನಲ್ಲಿ ಸದರಿ ಆಟದ ಮೈದಾನಕ್ಕೆ ಸ್ವಲ್ಪ ಭಾಗ ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡಲಾಗಿದ್ದು ಇನ್ನೂ ಬಾಕಿ ಇರುವ ಕಾಂಪೌಂಡ್ ಗೋಡೆ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಸದರಿ ಆಟದ ಮೈದಾನವನ್ನು ಸಾರ್ವಜನಿಕ ಬಳಕೆಗೆ ಉಪಯೋಗಿಸಿಕೊಂಡಲ್ಲಿ ಅನಧಿಕೃತ ಒತ್ತುವರಿಗಳನ್ನು ತಡೆಯಬಹುದಾಗಿದೆ. ಆದ ಕಾರಣ ಸದರಿ ಕಾಮಗಾರಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವ ಸಲುವಾಗಿ ಕೈಗೊಳ್ಳುವುದು ಅತ್ಯಾವಶ್ಯಕವಾಗಿದ್ದು ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುಮೋದನೆಗಾಗಿ ಸಲ್ಲಿಸಿದೆ.

| Sl No | Name of Works | Estimated Cost Rs. Lakhs |
|---|---|---|
| 1 | 2 | 3 |
| 1 | Improvement works to Sangolli Rayanna Play Ground in Ward No.126 | 93.00 |

ಮೇಲ್ಕಂಡ ಕಾಮಗಾರಿಯನ್ನು 2012-13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ-0607 ಅಡಿಯಲ್ಲಿ ಕೈಗೆತ್ತಿಕೊಂಡು ಕಾರ್ಯಗತಗೊಳಿಸಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಅಯುಕ್ತರು (ಯೋಜನೆ) ರವರ ದಿ.08.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/257/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 08.03.2013ರಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು ಮಹದೇವಪುರ ವಲಯ ವ್ಯಾಪ್ತಿಯಲ್ಲಿ ನಿರ್ವಹಿಸಿರುವ ಒಟ್ಟು 43 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮಾನ್ಯ ಶ್ರೀ ಅರವಿಂದ ಲಿಂಬಾವಳಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಶಾಸಕರು ಮಹದೇವಪುರ ಕ್ಷೇತ್ರ ರವರು ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ರೂ.23.28 ಕೋಟಿಗಳ ಅಂದಾಜಿನ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಿದ್ದು ಅದರಂತೆ ಹಿಂದಿನ ಮುಖ್ಯಮಂತ್ರಿಗಳು ಅನುಮೋದಿಸಿದ್ದು, ಸದರಿ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಸದರಿ ಕಾಮಗಾರಿಗಳನ್ನು ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಅಡಿ ಕೈಗೊಳ್ಳಬಹುದಾಗಿದ್ದು, ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

| ಲೆಕ್ಕಶೀರ್ಷಿಕೆ ಪಿ0541 : Emergency Reserve Fund/page No.55 | | | | |
|---|---|---|---|---|
| ಮಮೀಸಲಿಟ್ಟಿರುವ ಅನುದಾನ | ಜಾಬ್ ಸಂಖ್ಯೆ ನೀಡಿರುವ ಮೊತ್ತ | ಜಾಬ್ ಸಂಖ್ಯೆಗಾಗಿ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುವ ಮೊತ್ತ | ಉಳಿಕೆ ಅನುದಾನ | ಸದರಿ ಪ್ರಸ್ತಾವನೆ ಮೊತ್ತ |
| **10,000.00** | **949.78** | **0.00** | **9050.22** | **2338.00** |

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸೂಚಿಸಿರುವಂತೆ ಚಾಲ್ತಿ ಕಾಮಗಾರಿಗಳ ಲೆಕ್ಕಶೀರ್ಷಿಕೆ ಪಿ0541 ಅಡಿ ಲಭ್ಯವಿರುವ ರೂ.9050.22 ಲಕ್ಷಗಳಲ್ಲಿ ಭರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿ.08.03.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *06]. ವಿಷಯದ ಸಂಖ್ಯೆ :-ತೆಆಸ್ಥಾಸ/258/2012-13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22.02.2013ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ.72, ಹೇರೋಹಳ್ಳಿ ವ್ಯಾಪ್ತಿಯಲ್ಲಿನ 1)ತುಂಗಾನಗರ, 2)ಕೆಂಪೇಗೌಡನಗರ, 3)ವಿಘ್ನೇಶ್ವರನಗರ, 4)ಮಹದೇಶ್ವರನಗರ, 5)ಮುನೇಶ್ವರನಗರ 6)ಪ್ರಸನ್ನಬಡಾವಣೆಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಲು ಮಾನ್ಯ ಆಯುಕ್ತರ ಅನುಮೋದನೆಯಂತೆ ಮೇಲ್ಕಂಡ ಪ್ರದೇಶಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಲಾಗಿರುತ್ತದೆ.

ಮುಂದುವರೆದಂತೆ ಮೇಲ್ಕಂಡ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡಗಳು ಇಲ್ಲದ ಕಾರಣ ಖಾಸಗಿ ಕಟ್ಟಡಗಳನ್ನು ಬಾಡಿಗೆಗೆ ಪಡೆದು ಸುಮಾರು 12 ತಿಂಗಳುಗಳಿಂದ ಶಿಶುವಿಹಾರಗಳನ್ನು ನಡೆಸಿಕೊಂಡು ಬರುತ್ತಿದ್ದು, ಸದರಿ ಕಟ್ಟಡದ ಮಾಲೀಕರುಗಳಿಗೆ ಈವರೆಗೂ ಬಾಡಿಗೆ ಪವತಿ ಮಾಡಿರುವುದಿಲ್ಲ. ಈ ಬಗ್ಗೆ ಕಟ್ಟಡದ ಮಾಲೀಕರುಗಳು ಹಾಗೂ ನಗರ ಪಾಲಿಕೆ ಸದಸ್ಯರು ಅತೀ ಜರೂರಾಗಿ ಬಾಡಿಗೆಯನ್ನು ಪಾವತಿಸಲು ಕೋರಿರುತ್ತಾರೆ. ಆದ್ದರಿಂದ 2012-13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ-0256 (ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು ಹಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು ಮತ್ತು ಅಧ್ಯಯನ ಪುಸ್ತಕಗಳು)ರಡಿ ರೂ.12,73,766/-ಗಳಲ್ಲಿ ಸದರಿ ಕಟ್ಟಡದ ಮಾಲೀಕರುಗಳಿಗೆ ಬಾಡಿಗೆ ನಿಗದಿಪಡಿಸಲು ಹಾಗೂ ಈ ಹಿಂದಿನ 12 ತಿಂಗಳ ಬಾಡಿಗೆ ಮೊತ್ತ ರೂ.3,84,000/-ಗಳನ್ನು ಪಾವತಿಸಲು ಅನುಮೋದನೆಗಾಗಿ

ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿ:22.02.2013ರ ಟಿಪ್ಪಣಿಯನ್ನು ಒಪ್ಪುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ : 28.02.2013ರ ನಿರ್ಣಯ.

**ನಿರ್ಣಯ : ಶಿಕ್ಷಣ ಸ್ಥಾಯಿ ಸಮಿತಿಯ ದಿ.28.02.2013ರ ನಿರ್ಣಯವನ್ನು ಸಮಿತಿಯು ತೀರ್ಮಾನಿಸಿತು.**

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**